CC-O. In Public Domain. Digitized by eGangotri

ಮುನ್ನುಡಿ

ಶ್ರೀ ರಾಮಕೃಷ್ಣರ ಸಾಧನೆಯ ರೀತಿ ಎಷ್ಟು ವಿಶಿಷ್ಟವೂ ವೈವಿಧ್ಯ ಪೂರ್ಣವೂ ಆಗಿರುವುದೋ, ಅವರ ಉಪದೇಶ ವಿಧಾನವೂ ಅಷ್ಟೇ ವಿಶಿಷ್ಟವೂ ವೈವಿಧ್ಯಪೂರ್ಣವೂ ಆಗಿರುವುದು ಕಂಡುಬರುತ್ತದೆ. ಅವರು ತಮ್ಮ ಅಂತರಂಗ ಶಿಷ್ಯರಿಗೆ ಅವರವರ ಸ್ವಭಾವಕ್ಕನುಸಾರವಾಗಿ ನೀಡಿದ ಮಂತ್ರೋಪದೇಶ ರೂಪವಾದ ಶಿಕ್ಷಣ ನಮಗೆ ಅಗೋಚರವಾದುದು. ಆದರೆ ಎಲ್ಲರಿಗೂ ಗೋಚರವಾಗುವಂತೆ ಮಾತು-ಕತೆಗಳ ರೂಪದಲ್ಲಿ ಅವರು ಮಾಡಿದ ಉಪದೇಶ—ಶ್ರೀ ಮಾಸ್ಟರ್ ಮಹಾಶಯನ ಕೃಪೆಯಿಂದ 'ಶ್ರೀ ರಾಮಕೃಷ್ಣ ವಚನವೇದ' ರೂಪದಲ್ಲಿ ನಮಗೆ ಲಭ್ಯವಾಗಿರುವ ಉಪದೇಶ—ಸ್ಥೂಲವಾಗಿ ಹೇಳುವುದಾದರೆ ಮೂರು ಮುಖವುಳ್ಳದ್ದು. ಒಂದು, ಸರಳವಾದ, ಲಲಿತವಾದ, ಹಾಸ್ಯ ಮಿಶ್ರಿತವಾದ ಮಾತು ಸಂಹಿತೆಯ ಶೈಲಿಯಲ್ಲಿ ದೃಷ್ಟಾಂತ—ಪ್ರತಿಮಾ ವಿಧಾನಗಳ ಮೂಲಕ ಅಸಾಧಾರಣ ತತ್ವಾನುಭವಗಳನ್ನು ಅತ್ಯಂತ ಪ್ರಿಯವಾದ ರೀತಿಯಲ್ಲಿ ನಿರೂಪಿಸುವ ರೀತಿ. ಎರಡನೆಯದು, ಈ ವಜ್ರೋಭೂಮಿಕೆಯಲ್ಲಿ ವಿಹರಿಸುತ್ತಿರುವಾಗಲೇ, ತಾವು ಹೇಳುವ ಉಪದೇಶಕ್ಕೆ ಸಂಬಂಧಿಸಿದಂತೆ ಒಂದು ವಿಷಯವನ್ನೋ ತತ್ವವನ್ನೋ ಸ್ಪಷ್ಟಪಡಿಸುವಂತೆ, ಸಮರ್ಥಿಸುವಂತೆ, ಇದ್ದಕಿದ್ದ ಹಾಗೆಯೇ ತಮ್ಮ ಮಧುರವಾದ, ದೇವದುರ್ಲಭವಾದ ಕಂಠದಿಂದ ಹಲವು ಸಂತರ ಗೀತೆಗಳನ್ನು ಹಾಡಿ ಇಡೀ ಆವರಣವನ್ನೇ ಒಂದು ಬಗೆಯ ಅಪೂರ್ವ ರೋಮಾಂಚನದಲ್ಲಿ ನಿಲ್ಲಿಸುವ ರೀತಿ. ಮೂರನೆಯದು, ಆ ಗೀತದ ಹೊನಲು ತೀವ್ರವಾಗಿ, ಒಂದು ಸಾಮೂಹಿಕ ನರ್ತನವನ್ನು ಪ್ರಚೋದಿಸುವುದರ ಮೂಲಕವೋ, ಅಥವಾ ನೇರವಾಗಿಯೋ ಪರಮಹಂಸರನ್ನು ಸಮಾಧಿಯ ಮೌನ ಶಿಖರಕ್ಕೇರಿಸುವುದರ ಮೂಲಕ ಅಪೂರ್ವಾನುಭವವನ್ನು ಉಂಟುಮಾಡುವ ರೀತಿ. ಈ ಸಮಾಧಿಸ್ಥಿತಿ ಅವರ ಉಪದೇಶದ ಮೌನಶಿಖರ ; ಮಾತು ಮನಂಗಳಿಂದತ್ತತ್ತ ಮೀರಿದ, ಕೇವಲ ಹೃದಯ ಸಂವೇದ್ಯವಾದ ಉಪದೇಶಾನುಭವ ಅದು.

ಶ್ರೀ ರಾಮಕೃಷ್ಣರ ಉಪದೇಶದಲ್ಲಿಯಂತೆ ಗಾನ ಸಂಯೋಜನೆ ನಮಗೆ ಬಹುಶಃ ಬೇರಾವ ಸಂತರ ಬದುಕಿನಲ್ಲೂ ಕಾಣದೆನ್ನಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರು ತಮ್ಮ ಉಪದೇಶದ ಮಾತು-ಮೌನಗಳ ನಡುವೆ ಸಮಯೋಚಿತವಾಗಿ ಬಳಸುವ ಈ ಗೀತಗಾನವೂ ಒಂದು ರೀತಿಯಲ್ಲಿ ಅವರ ಅಪೂರ್ವವಾದ ಉಪದೇಶ ವಿಧಾನದ ಒಂದು ಅವಿಭಾಜ್ಯ ಅಂಗವಾಗಿದೆ. ರಾಮಪ್ರಸಾದ-ದಾಶರಥಿ-ಉದ್ಧವದಾಸ-ನಾನಕ್-ಕಬೀರ್ ಮೊದಲಾದ ಸಂತರಿಂದ ಹೊರ ಹೊಮ್ಮಿದ ಈ ವಾಣಿ, ಅನೇಕ ಭಕ್ತರ ನಾಲಗೆಯ ಮೇಲೆ ನಲಿದು, ಭಕ್ತಿ ಭಾವೋದ್ದೀಪನಗೊಳಿಸಿ ಮೊದಲೇ ಪವಿತ್ರವಾದುವು. ಅವುಗಳು ಮತ್ತೆ ಪರಮಹಂಸರ ಶ್ರೀಕಂಠದ ಮೂಲಕ ಹರಿದು ಬಂದು ಮತ್ತೂ ಪವಿತ್ರವಾದ ಕಾರಣ, ಇವುಗಳನ್ನು ನಾವು ಇಲ್ಲಿ 'ತೀರ್ಥವಾಣಿ' ಎಂದು ಕರೆದಿದ್ದೇವೆ.

ಇಲ್ಲಿರುವ ಐವತ್ತು ಗೀತಗಳನ್ನು 'ಶ್ರೀರಾಮಕೃಷ್ಣ ವಚನವೇದ'ದಿಂದ ಆರಿಸಿ ಕೊಡಲಾಗಿದೆ. ಹಾಗೆ ಆರಿಸುವಲ್ಲಿ ಯಾವ ಗೀತಗಳು ಸಾಹಿತ್ಯ ದೃಷ್ಟಿಯಿಂದ ವಿನೂತನವೂ, ಅಪೂರ್ವವೂ ಆಗಿರುವಂತೆ ತೋರಿತೋ ಅಷ್ಟನ್ನು ಮಾತ್ರ ಸಂಗ್ರಹಿಸಿ ಕೊಡಲಾಗಿದೆ.

ಏಳು ವರ್ಷಗಳ ಹಿಂದೆ ಮೈಸೂರಿನ ಶ್ರೀ ರಾಮಕೃಷ್ಣಾಶ್ರಮದವರು ವಂಗ ಭಾಷೆಯಲ್ಲಿ ಮಾಸ್ಟರ್ ಮಹಾಶಯನಿಂದ ರಚಿತವಾಗಿರುವ 'ಶ್ರೀರಾಮಕೃಷ್ಣ ಕಥಾಮೃತ'ವನ್ನು 'ಶ್ರೀರಾಮಕೃಷ್ಣ ವಚನವೇದ'ವೆಂಬ ಹೆಸರಿನಿಂದ ಕನ್ನಡಕ್ಕೆ ಅನುವಾದಿಸುವ ಏರ್ಪಾಡು ಮಾಡಿದಾಗ, ಆಶ್ರಮದವರು ಅದರಲ್ಲಿ ಬರುವ ಬಂಗಾಳೀ ಗೀತಗಳನ್ನು ಕನ್ನಡಕ್ಕೆ ಅನುವಾದ ಮಾಡಬೇಕೆಂದು ನನ್ನನ್ನು ಕೃಪೆಯಿಟ್ಟು ನಿಯೋಜಿಸಿದರು. ನಾನು ಬಂಗಾಳಿಮೂಲ, ಹಾಗೂ ಆಂಗ್ಲ ಅನುವಾದಗಳನ್ನು ಅವಲಂಬಿಸಿ ಅವುಗಳನ್ನು ಕನ್ನಡಿಸಿದ್ದೇನೆ. ವಂಗ ಭಾಷೆಯ ಅಪೂರ್ವವಾದ ಸ್ವರ ಮಾಧುರ್ಯವನ್ನೂ, ಛಂದೋ ವೈವಿಧ್ಯಗಳನ್ನೂ ಕನ್ನಡಕ್ಕೆ ತರಲಾಗದಿದ್ದರೂ, ಮೂಲದ ಭಾವಕ್ಕೆ ಆದಷ್ಟು ಅಪಚಾರವಾಗದ ರೀತಿಯಲ್ಲಿ, ಕನ್ನಡಕ್ಕೆ ತಂದಿದ್ದೇನೆಂಬ ಭರವಸೆ ನನಗಿದೆ. ಅನುವಾದ ಸಮಯದಲ್ಲಿ ಈ ಗೀತಗಳ ಅಪೂರ್ವ ಭಾವನೆಯ ಪರಿಭಾವನೆಯಲ್ಲಿ ನಿಂತು ಒಂದು ಬಗೆಯ ನಲವನ್ನೂ ಪಾವಿತ್ರ್ಯದ ಕಿಂಚಿತ್ ಸ್ಪರ್ಶವನ್ನೂ ತತ್ಕಾಲಕ್ಕಾದರೂ ಪಡೆದು, ಅವ್ಯಾಜವಾಗಿ ಬಳಿಗೆ ಬಂದ ಶ್ರೀಗುರು ಕೃಪೆಯು ನಾನಲ್ಪಜ್ಞಾನಕ್ಕೆ ದೊರಕಿದಂತಾಗಿದ್ದೇನೆ.

Sri Vidyabharati Book Centre, Sringeri

CC-O. In Public Domain. Digitized by eGangotri

ಈ ಗೀತಗಳಿಗೆ ಕೊಟ್ಟಿರುವ ಹಣೆ-ಹೆಸರು ಔಪಚಾರಿಕವಾಗಿ, ಅನುಕೂಲಕ್ಕಾಗಿ ಇಟ್ಟುಕೊಂಡದ್ದು. ಇಲ್ಲಿನ ಎಷ್ಟೋ ಗೀತಗಳು ಹಾಡಲು ಅನುಕೂಲವಾಗಿವೆ ಎಂಬುದು ಮೇಲೆಯೇ ವೇದ್ಯವಾಗುತ್ತದೆ. ಭಕ್ತಿರಸದ ನೆಲೆಯಿಂದ ಮೂಡಿದ ಈ ಗೀತಗಳು ಸಾಹಿತ್ಯ ದೃಷ್ಟಿಯಿಂದಲೂ ಅಪೂರ್ವವಾದುವು ಎಂಬ ಕಾರಣದಿಂದ ಇವುಗಳನ್ನು 'ಶ್ರೀರಾಮಕೃಷ್ಣ ವಚನ ವೇದ'ದ ದಿವ್ಯ ದೇಗುಲದ ಕಟ್ಟಡದಿಂದ ಪ್ರತ್ಯೇಕಿಸಿ ಪ್ರಕಟಿಸಲು ಒಂದು ಕಾರಣವೆನ್ನ ಬಹುದು.

ಮೈಸೂರು
12—10—1960

ಜಿ. ಎಸ್. ಶಿವರುದ್ರಪ್ಪ-

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿವಿಡಿ

			ಪುಟ
1.	ಹೌದೇನೆ ಉಮಾ	...	1
2.	ನಿನ್ನ ನಿನ್ನವರ ನುಂಗಿ ನೊಣೆವೆ ನಾ	...	2
3.	ನಮೋ ಗೌರಿ	...	3
4.	ಮರೆಯದಿರು ಈಗಾದರೂ	...	5
5.	ಬುದ್ಧಿಯರಿತರು ಹೃದಯವರಿಯದು	...	6
6.	ಯಾರು ?	...	7
7.	ಭೈರವನಾರೀ	...	8
8.	ಆಪರೂಪರಾಶಿ	...	9
9.	ಕೃತಜ್ಞತೆ	...	10
10.	ಮುಳುಗುತಿದೆ ನೌಕೆ	...	11
11.	ಪಟವನಾಡಿಸುತಿಹಳು	...	12
12.	ಒಳಗೆ ಬಂದು ಕೂಡು	...	13
13.	ಏನು ಅದ್ಭುತ ಪೂಜೆ ಸಲ್ಲುತಿದೆ ನಿತ್ಯವೂ !	...	14
14.	ನಿನ್ನಿಚ್ಛೆಯಂತೆ	...	15
15.	ಮಹಾಮಾಯೆ	...	16
16.	ಉಭಯ ಸಂಕಟ	...	17
17.	ಕೃಷಿಕನಿಗೆ	...	18
18.	ನಿನ್ನ ಮಹಿಮೆ	...	19
19.	ಶಶಿಕಳೆಯೂ ಜ್ವಲಿಸಿದೆ	...	21
20.	ನೀನೆ ದಯಾಮಯ	...	22
21.	ಸಮರ ಕರೆಯುತ್ತಿದೆ	...	23
22.	ತಪಸ್ಸು	...	24
23.	ಎಲ್ಲಿ ಅರಸುವೆ ನನ್ನ ?	...	25
24.	ನಿನ್ನೊಳಗೇ ನೀನಿರು	...	26
25.	ತಿರುಕನಂತೆ ಇರು ಬಾಗಿಲಲಿ	...	27
26.	ಅನ್ವೇಷಣೆ	...	28
27.	ಪೂರ್ವಸ್ಮೃತಿ	...	29
28.	ಆಹ್ವಾನ	...	30
29.	ಹೃದಯಬೃಂದಾವನದಿ	...	31

Sri Vidyabharathi Book Centre, Sringeri

CC-O. In Public Domain. Digitized by eGangotri

			ಪುಟ
30.	ನಡೆಯಲಾರೆನು ಮುಂದೆ	...	32
31.	ಯಾರು ಈ ಗಾರುಡಿಗ ?	...	33
32.	ಬೇಡಿಕೆ	...	34
33.	ಏಕೀ ವಿಷಾದವು ರಾಧೆ ?	...	35
34.	ಬೇರೆ ಹಾದಿಯು ಏನಿದೆ ?	...	36
35.	ಕಡೆಗೆ ಹರಣವ ನೀಗುವೆ	...	37
36.	ಕೊಳಲುಲಿ	...	38
37.	ಕೊಡವನು ತುಂಬಲು ನೀನೂ ಬಂದರೆ	...	39
38.	ಬರಿ ಕನಸಿದು ಸಖಿ	...	40
39.	ಕೃಷ್ಣ ವರ್ಣದೊಳಿರಲಿ ಈತನು	...	41
40.	ಆದರೊಂದೆ ಶಂಕೆ ನನಗೆ	...	42
41.	ಬಯಕೆ	...	43
42.	ಮಧುರ ಮಿಲನ	...	44
43.	ಹಿತವಚನ	...	45
44.	ಪ್ರಶ್ನೆ–ಉತ್ತರ	...	46
45.	ನೆನಪಿಲ್ಲವೇನೊ	...	47
46.	ನೆನಪು	...	48
47.	ಏನು ನಿರುಪಮ ಸೊಬಗು	...	49
48.	ಮೋಹನ ಮೂರುತಿಯನು ನೆನೆಯೊ	...	50
49	ನಾರದ ಪಂಚರಾತ್ರದಿಂದ	...	51
50.	ಪ್ರಾರ್ಥನೆ	...	52

Sri Vidyabharathi Book Centre, Sringeri

CC-O. In Public Domain. Digitized by eGangotri

ಹೌದೇನೆ ಉಮಾ

ಹೌದೇನೇ ಉಮಾ ಹೌದೇನೆ,
ಜನವೆನ್ನುವುದಿದು ನಿಜವೇನೇ ?—
ಮಸಣದ ಬೂದಿಯ ಮೈಗೆ ಬಳಿದು ಶಿವ
ಎಲ್ಲೆಲ್ಲೋ ತಿರುಗುವನಂತೆ !
ಹೊಟ್ಟೆ ಬಟ್ಟೆಗೂ ಗತಿಯಿಲ್ಲದರೊಲು
ಊರುರಲು ತಿರಿದುಂಬುವನಂತೆ !

ನೀನು ಕೂಡ ಬಂಗಾರದ ಮೈಯಿಗೆ
ಆ ಬೂದಿಯನೇ ಬಳಿಯುವೆಯಂತೆ !
ನಿನ್ನ ತಾಯಿ ನಾನಾಗಿಹ ತಪ್ಪಿಗೆ
ಸಹಿಸಬೇಕೆ ಅವಮಾನವನು ?
ಮತ್ತೆ ನಿನ್ನ ಶಿವ ಕರೆಯಲು ಬರಲಿ,
'ಮನೆಯೊಳಿಲ್ಲ ಉಮೆ'—ಎನ್ನುವೆನು.

Sri Vidyabharathi Book Centre, Sringeri

CC-0. In Public Domain. Digitized by eGangotri

ನಿನ್ನ ನಿನ್ನವರ ನುಂಗಿ ನೊಣವೆ ನಾ . . . .

ಗಂಡಯೋಗದಲಿ ಜನಿಸಿದಂಥ ಶಿಶು ತಿನುವುದಂತೆ ತಾಯ !
ನಾನು ಅಂಥ ಶಿಶು ; ನಿನ್ನ ನುಂಗುವೆನು ತೆರೆದು ನನ್ನ ಬಾಯ.
ನೀನೆ ನುಂಗುವೆಯೊ ನಾನೆ ನುಂಗಲೋ ಹೇಳು ಹೇಳು ಬೇಗ
ಎರಡರೊಳಗೆ ಬಂದಾಗಿಬಿಡಲಿ ನೀ ಹೇಳು, ಕಾಳಿ, ಈಗ !

ಕಾಳಿ ಕಾಡಿಗೆಯ ಕೈಗೆ ಮೈಗೆ ನಾ ಬಳಿದುಕೊಂಡು ನಿಲುವೆ
ಮೃತ್ಯು ಬರಲು ನಾನವನ ಮುಖಕು ಈ ಕಾಳಿಯನ್ನೆ ಬಳಿವೆ !
ನಿನ್ನ ನುಂಗಿದರು ನಿನ್ನನರಗಿಸಲು ಆಗದೆನಗೆ ತಾಯಿ !
ಹೃದಯ ಪದ್ಮದಲಿ ನಿನ್ನನಿರಿಸಿ ನಾ ಪೂಜೆಗೈವೆ ಮನದಿ.

ನಿನ್ನ ನುಂಗಿದರೆ, ನಿನ್ನ ಪತಿದೇವ ಆ ಕಾಳ ರೇಗಬಹುದು.
ನಿನ್ನ ನಾಮವನೆ ಜಪಿಸಿ ಕಾಳನನು ನಾನು ತಡೆಯಬಹುದು.
ನಾನು ನಿನ್ನ ಮಗನೆಂಬ ಮಹಿಮೆಯನು ಜಗಕೆ ತೋರಲೆಂದೇ
ನಿನ್ನ, ನಿನ್ನವರ ನುಂಗಿ ನೊಣವೆ ನಾ ಜೀವ ಹೋಗಲಿಂದೇ !

Sri Vidyabharathi Book Centre, Sringeri

CC-O. In Public Domain. Digitized by eGangotri

ನಮೋ ಗೌರಿ

ನಮೋ ಗೌರಿ ನಾರಾಯಣಿ ಶ್ರೀ ದುರ್ಗಾಮಾಯಿ
ನಿನ್ನಯ ಕೃಪೆ ಇಲ್ಲದಿರಲು ನಾನು ಕಾಣೆ ತಾಯಿ.
ನೀನೆ ಹಗಲು, ನೀನೆ ಇರುಳು, ನೀನೆ ಸಂಜೆ, ರಾತ್ರಿ.
ಕೋಽದಂಡಪಾಣಿಯಾದ ಶ್ರೀ ರಾಮರೂಪಿಣೀ
ಕೊಳಲ ಹಿಡಿದು ಗಾನಗೈವ ಗೋಽಪಾಲ ರೂಪಿಣೀ
ಶಿವನ ಮೆಟ್ಟಿ ಮೇಲೆ ನಿಂತ ರುದ್ರಭದ್ರ ಕಾಳಿ ನೀ,
ದಶಾವತಾರಿ ನೀನೆ, ದಶಮಹಾವಿದ್ಯೆ ನೀನೆ,
ಪರಮಶಕ್ತಿ ರೂಪಿಣೀ
ಭವಸಾಗರ ತಾರಿಣೀ.

ಬಿಲ್ವದಲದಿ ಪೂಜೆಗೈದ ಯಶೋದಾ ತಾಯಿಗೆ,
ಬಾಲಗೋಽಪಾಲನನ್ನು ಕೊಟ್ಟ ಮಹಾ ತಾಯಿ.
ಕಾಡಿನಲೋ ಬೀಡಿನಲೋ, ಎಲ್ಲಾದರೂ ಇರಲಿ ನಾ,
ಎಂಥ ಸಾವು ಬಂದರೂ
ನಿನ್ನ ನೆನಪು ಉಳಿಯಲೆನಗೆ
ನನ್ನ ಅಂತ್ಯಕಾಲದಿ.

ನೀನೆ ನನ್ನ ನೂಂಕಿಬಿಟ್ಟರೆಲ್ಲಿ ನನಗೆ ತಾವಿದೆ
ನಿನ್ನ ಅಡಿಯಲಲ್ಲದೆ !
' ಹೋಗು ನಡೆ ' — ಎಂದು ನೀನು ಗದರಿಕೊಂಡು ತಳ್ಳಿದರೂ
ಕಾಲಂದಿಗೆಯಾಗಿ ನಿನ್ನ ಕಾಲಿಗಂಟಿಕೊಳ್ಳುವೆ !
ಶಿವನ ಜೊತೆಗೆ ಕುಳಿತು ನೀನು ಸರಸವಾಡುವಾಗ, ನಾನು
ಜೈ ಶಿವಾ—ಎನ್ನುವೆ !

CC-O. In Public Domain. Digitized by eGangotri

ಗರುಡನಾಗಿ ನೀನು ಮೇಲೆ ನೀಲಬಾನೊಳಾಡುವಾಗ
ಕಿರಿಯ ಮೀನವಾಗಿ ನಾನು ತೆರೆಯ ತುದಿಯೊಳಾಡುವೆ !
ಆಗ ನೀನು ಮೇಲೆ ಎರಗಿ ನಿನ್ನ ನಖದಿ ಹಿಡಿಯುವೆ ;
ಆಗ ಉಸಿರು ಕಟ್ಟಿ ನಾನು ಒದ್ದಾಡುತಲಿದ್ದರೂ
ನನ್ನ ನೂಕಬೇಡ ತಾಯಿ, ಓ ಕಾಲ ಕಾಮಿನೀ
ನಿನ್ನ ಪಾದಪದ್ಮ ನೌಕೆ ಭವಸಾಗರ ತಾರಿಣಿ.

ನೀನೆ ಸ್ವರ್ಗ, ನೀನೆ ಮರ್ತ್ಯ; ನೀನೆಯೆ ಪಾತಾಳ,
ದ್ವಾದಶ ಗೋಪಾಲ ಮತ್ತೆ ಹರಿಹರ ಬ್ರಹ್ಮಾದಿಗಳಿಗೆ
ನಿನ್ನ ಬಸಿರೆ ಮೂಲ.

ಓ ಅನಂತೆ, ಅನ್ನಪೂರ್ಣೆ, ನಮೋ ಸರ್ವಮಂಗಳೇ
ಶೂಲಹಸ್ತ ಶೂಲಪಾಣಿ
ತಾನೆ ರಕ್ಷೆ ನಿಲುವನಲ್ತೆ
ನಿನ್ನ ನೆನೆವ ಭಕ್ತಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮರೆಯದಿರು ಈಗಾದರೂ

ನಿನ್ನ ನಿತ್ಯಾನಂದದಾಚೆಗೆ ತಳ್ಳದಿರು ನೀನೆನ್ನನು
ನಿನ್ನ ಪಾದವನಲ್ಲದೀ ತನು ಬೇರೆ ಏನೂ ಕಾಣನು
ಮೃತ್ಯು ಬಂದೆನ್ನೆದುರು ಹುಬ್ಬನು ಗಂಟು ಹಾಕುತಲಿರುವನು
ಹೇಳು ತಾಯೀ, ಏನು ಹೇಳಲಿ ? ಅವನು ಬಾಗಿಲೊಳಿರುವನು.

ನಿನ್ನ ನಾಮವನೊಂದ ನಂಬುತ ನಾನು ಭವಸಾಗರದೊಳು
ನನ್ನ ದೋಣಿಯ ತೇಲಿಬಿಡುವೀ ಬಯಕೆಯಿದ್ದಿತು ಎದೆಯೊಳು
ತೀರವಿಲ್ಲದಪಾರಕತ್ತಲ ಮೊರೆಮೊರೆವ ಮುನ್ನೀರೊಳು
ಒಮ್ಮೆಗೇ ನೀ ಕೈಬಿಡುವೆ ಎಂಬುದ ಕನಸಿನಲ್ಲೂ ಕಾಣೆನು.

ನಿನ್ನ ತಾರಕ ನಾಮವನು ನೆನೆದಿಲ್ಲಿ ಮುಳುಮುಳುಗೇಳುವೆ
ಹಗಲೂ ಇರುಳೂ ನಿನ್ನ ನೆನೆದರು ತೀರದಾಗಿದೆ ವೇದನೆ
ನಾನು ಈ ಸಲ ಮುಳುಗಿ ಸತ್ತರೆ, ನಾಳೆ ನಿನ್ನಯ ಹೆಸರನು
ಮತ್ತೆ ಯಾರೂ ಜಪಿಸರೆಂಬುದ ಮರೆಯದಿರು ಈಗಾದರೂ !

CC-O. In Public Domain. Digitized by eGangotri

ಬುದ್ಧಿಯರಿತರು ಹೃದಯವರಿಯದು . . .

ತಾಯಿ ದುರ್ಗೆಯ ನಿಜವನರಿಯುವ ಧೀರರಾರೋ ಜಗದೊಳು !
ಆರು ದರುಶನ ವೇದಶಾಸ್ತ್ರ ಪುರಾಣವರಿಯದು ಅವಳನು !
ಯೋಗಿ ಹೃದಯದ ದಿವ್ಯ ನಿತ್ಯಾನಂದ ರೂಪಿಣಿ ಆಕೆಯು
ತನ್ನ ಆನಂದದಲಿ ತಾನೇ ಜೀವರೆದೆಯೊಳಗಿರುವಳು.

ಸಕಲ ಬ್ರಹ್ಮಾಂಡವನು ಬಸಿರಲಿ ಧರಿಸಿ ನಿತ್ಯವು ಪೊರೆವಳು
ಮೂಲಾಧಾರ ಸಹಸ್ರಾರದಲ್ಲಿಯೆ ಮುನಿಗಳವಳನು ನೆನೆವರು
ಶಿವನ ಹೊರತಿನ್ನಾರು ಅರಿಯರು ಅವಳ ದಿವ್ಯ ಸ್ವರೂಪವ,
ಪದ್ಮವನದಲಿ ಹಂಸರೂಪನ ಜೊತೆಗೆ ನಲಿಯುವ ಮಾಟವ !

ಕಡಲನೀಜುವೆನೆಂಬ ಮರುಳನ ಕಲ್ಪನೆಗೆ ನಗುವಂದದಿ
ಇಂಥ ತಾಯಿಯ ತಿಳಿದೆನೆಂದರೆ ಪ್ರಸಾದರಾಮನು ನಗುವನು !
ಕುಬ್ಜನಾದವ ಮುಗಿಲ–ಚಂದ್ರನ ಹಿಡಿವ ಯತ್ನದ ತೆರದಲಿ
ಬುದ್ಧಿಯರಿತರು ಹೃದಯವರಿಯದು ತಾಯಿ ದುರ್ಗೆಯ ನಿಜವನು !

CC-O. In Public Domain. Digitized by eGangotri

ಯಾರು ?

ನಟ್ಟಿರುಳ ನಭದಂತೆ ಕಾಳಿಮಾ ತನುವಾಗಿ
ಧಾವಿಸುವ ನಾರಿ ಯಾರು ?
ರಕ್ತ ಸಾಗರದಲ್ಲಿ ನೀಲ ಕಮಲದ ತೆರದಿ
ರಣರಂಗದಲಿ ಕುಣಿವ ಇವಳು ಯಾರು ?

ಯಾರೀ ದಿಗಂಬರೆಯು, ತನ್ನ ಮೂರ್ ಕಣ್ಣನೂ
ದಿಕ್ಕು ದಿಕ್ಕಿಗೆ ಇಂತು ಹೊರಳಿಸುವಳು !
ಆ ಶೂಲ ಪಾಣಿಯನೆ ಶವದಂತೆ ಮೆಟ್ಟುತ್ತ
ತರಿನಡುಗೆ ನರ್ತನವ ಗೈಯ್ಯುವವಳು !

Sri Vidyabharathi Book Centre, Sringeri

CC-O. In Public Domain. Digitized by eGangotri

ಭೈರವ ನಾರೀ

ನಲಿಯುವಳಾರೀ ಭೈರವ ನಾರೀ
ರಣರಂಗದೊಳೀ ಬೆಳಕನು ಬೀರಿ !

ಮಿಂಚಿನ ಬಳಗವನೊಳಕೊಂಡಿರುವ
ಮುಂಗಾರ್ ಮೋಡದ ಮಯ್ಯವಳು !
ಮಿಂಚುವ ಡಾಡೆಯ, ಬಿಡುಮುಡಿಗೂದಲ
ರುದ್ರಭಯಂಕರಿ ನುಗ್ಗುವಳು !
ಇಂತು ರೌದ್ರವನು ತೋರುತ ಮೆರೆಯುವ
ಧೀರನಾರಿಯಿವಳಾರಿವಳು ?

ಎನಿತು ಮನೋಹರ ನೋಡು ಹಣೆಯೊಳಗೆ
ಅಂಟಿಕೊಂಡಿರುವ ಬೆವರುಮಣಿ !
ಕೆದರುಗೂದಲಲಿ ಝೇಂಕೃತಿಗೈಯ್ಯುತ
ಹಾರಾಡುವ ಆ ಭೃಂಗಾಳಿ !
ಭುವನ ಮೋಹಿನಿಯ ರೂಪದೆದುರು, ಆ
ಚಂದಿರನೇ ಬಲು ನಾಚಿಹನು.
ಅಚ್ಚರಿ, ಅಚ್ಚರಿ, ಶಿವನೇ ಆಕೆಯ
ಪದತಲದೆಡೆ ಶವದಂತಿಹನು !
ಈ ಗಜಗಾಮಿನಿ ಲೋಕಮಾತೆ ಶ್ರೀ
ಮಹಾಕಾಳಿ ಎಂತೆಂಬುದನು,
ಕಮಲಾಕಾಂತನು ಊಹಿಪನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಪರೂಪರಾಶಿ

ಮಿರುಗುತಿದೆ ನಿನ್ನ ಅಪರೂಪರಾಶಿ ನಿಬಿಡಾಂಧಕಾರದಲ್ಲಿ !
ನಿನ್ನನದರಿಂದಲೇ ನೆನೆವರೌ ಯೋಗಿಗಳು ಗಿರಿಗುಹೆಗಳಲ್ಲಿ !
ಅನಂತ ಅಂಧಕಾರದ ಮೇಲೆ ಮಹಾನಿರ್ವಾಣ ಹಿಲ್ಲೋಲದಲ್ಲಿ
ಹರಿಯುತಿದೆ ನಿರಂತರವು ಚಿರ ಶಾಂತಿ ಪರಿಮಳವ ಚೆಲ್ಲಿ !

ಕಗ್ಗತ್ತಲುಡಿಗೆಯನು ಧರಿಸಿ ಈ ಮಹಾಕಾಲ ರೂಪದಲ್ಲಿ
ನೀನಾರು ತಾಯಿ ಮಗ್ನಳಾಗಿರುವೆ ಮಹಾ ಸಮಾಧಿಯಲ್ಲಿ !
ನಿನ್ನ ಭಯಪದಕಮಲ ಪ್ರೇಮಕಾಂತಿಯ ಮಿಂಚು ಬೆಳಕಿನಲ್ಲಿ
ಅಟ್ಟಹಾಸದೊಳಿರುವ ನಿನ್ನ ಚಿನ್ಮಯವದನ ಕಾಣುತಿಹುದಿಲ್ಲಿ !

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃತಜ್ಞತೆ

ಮಾನವ ಸಂತಾನದೆಡೆಗೆ ಎನಿತು ಕರುಣೆ ನಿನ್ನದು !
ಅದ ನೆನೆದರೆ ಕಂಬನಿಯೇ ಕೋಡಿವರಿದು ಹರಿವುದು !

ಹುಟ್ಟಿದಂದಿನಿಂದ ನಾನು ನಿನ್ನಾಣೆಯ ಮೀರಿದೆ,
ಆದರು ನೀ ಅಕ್ಕರೆಯಲಿ ತಾಯೊಲವನೆ ತೋರಿದೆ !
ಮಧುರ ವಚನದಿಂದ ಮನವ ಸಂತೈಸುತ ನಲಿಸಿದೆ,
ಇದ ನೆನೆದರೆ ಕಂಬನಿಯೇ ಕೋಡಿಯೊಡೆದು ಹರಿದಿದೆ.

ನಿನ್ನೊಲವಿನ ಹೊರೆಯ ಹೊತ್ತು ನಾನು ಕರೆದು ಬಳಲಿದೆ,
ಇನ್ನು ಮುಂದೆ ಹೊರಲಾರದೆ ಎದೆಯು ಕೊರಗಿ ನರಳಿದೆ.
ನಿನ್ನೊಲವಿನ ಕರಸ್ಪರ್ಶದಿ ಈ ನೋವನು ನೀಗಿಸು,
ನಿನ್ನ ಪಾದಪದ್ಮಗಳಲಿ ನನ್ನನಿರಿಸಿ ಪಾಲಿಸು.

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಳುಗುತಿದೆ ನೌಕೆ

ಓ ತಾಯಿ ಓ ತಾಯಿ ಮುಳುಗುತಿದೆ ನೌಕೆ
ಈ ಜಗದ ಕತ್ತಲಿನ ಕಡಲ ತೆರೆ ತಳಕೆ !
ಸುತ್ತು ಮುತ್ತಲಿನಿಂದ ಮಾಯ ಮೋಹದ ಗಾಳಿ
ಬೀಸಿ ದಾಳಿಯ ಮಾಡಿ ಭೋರಾಡಿದೆ !

ಮನವಿಲ್ಲಿ ಮಂಕಾಯ್ತು, ಅರಿವರ್ಗ ಬಲವಾಯ್ತು,
ಹುಟ್ಟೊಡೆದು ಪಟಹರಿದು ಮುರಿದು ಬಿತ್ತು,
ನಿಷ್ಕರುಣ ಗಾಳಿಯಲಿ ನನ್ನ ದೋಣಿಯು ಬಂದು,
ಇಂದು ಈ ಗತಿಯಲ್ಲಿ ಸಿಕ್ಕುದಾಯ್ತು.

ಇದೊ ನುಗ್ಗುತಿದೆ ನೋಡು, ದೋಣಿಯೊಳಗಡೆ ನೀರು,
ಹೇಳು ನಾನಿನ್ನೀಗ ಮಾಳ್ಪುದೇನು ?
ಸೋತ ಕಣ್ಣಿನ ಸುತ್ತ ಕತ್ತಲೆಯ ಪರಿವಾರ,
ನಿನ್ನ ನಾಮವೇ ನನಗೆ ತೇಲೊಟ್ಟಲು !

Sri Vidyabharathi Book Centre, Sringeri

CC-O. In Public Domain. Digitized by eGangotri

ಪಟವನಾಡಿಸುತಿಹಳು

ಪಟವನಾಡಿಸುತಿಹಳು ಈ ನನ್ನ ಘನಶ್ಯಾಮೆ
ಜಗದ ಸಂಸಾರಗಳ ಪೇಟಿಯಲ್ಲಿ.
ಮಾಯೆಯೀ ಸೂತ್ರದಲಿ ಬಿಗಿದ ಪಟವೇರುತಿವೆ
ತುಂಬಿರುವ ಭರವಸೆಯ ಗಾಳಿಯಲ್ಲಿ !

ನರರಸ್ಥಿಪಂಜರದಿ ಮೂರು ಗುಣಗಳ ಬೆಸೆದು
ರಚಿಸಿರುವಳೀ ತಾಯಿ ಕುಶಲ ಕಲೆಯ,
ಪಟದ ಸೂತ್ರದ ಮೇಲೆ ವಿಷಯದಂಟನು ಬಳಿದು
ಹರಿಯದಂತವುಗಳನು ರಚಿಸಿರುವಳು.

ಇಂತು ಹಾರುವ ನೂರು ಸಾವಿರದ ಪಟಗಳಲಿ
ಒಂದೋ ಎರಡೋ ಹರಿದು ಬಿಡುಗಡೆಯ ಪಡೆದು,
ಹೋಗುತಿರಲವುಗಳನು ನಿರುಕಿಸುತ ಈ ತಾಯಿ
ಕೈಯ್ಯ ಚಪ್ಪಳೆತಟ್ಟಿ ನಲಿಯುತಿಹಳು.

ರಾಮಪ್ರಸಾದನಿದೊ ನುಡಿಯುವನು : " ಓ ತಾಯಿ
ಅನುಕೂಲ ಮಾರುತವು ಬೀಸುವಾಗ,
ನೀನಿನಿತು ಕೃಪೆಗೈದು ಕೈ ಸಡಿಲಗೊಳಿಸಿದರೆ
ಎನಿತೊ ಪಟ ದಾಟುವುವು ಭವಜಲಧಿಯ ! "

Sri Vidyabharathi Book Centre, Sringeri

CC-O. In Public Domain. Digitized by eGangotri

ಒಳಗೆ ಬಂದು ಕೂಡು...

ಅಂತರಂಗದಲಿ ಶ್ರೀ ಘನಶ್ಯಾಮೆಯ
ಆದರಿಸೆಲೆ ಮನವೇ.
ನಮ್ಮಿಬ್ಬರ ಹೊರತಿನ್ನಾರೂ ತಿಳಿಯದ
ರೀತಿಯೊಳವಳೆಡೆ ಸಾಗುವೆವೇ !

ಬಯಕೆ ಸಂಕುಲವ ಬಾಗಿಲಾಚೆಗೇ
ನಿಲಿಸಿ ಬಾರೊ ಮನವೇ,
ಏಕಾಂತದಿ ನೀನಾಕೆಯ ಕಾಣಲು,
'ಓ ತಾಯೀ' ಎಂತೆನ್ನುವ ರಸನೆಯ
ಜೊತೆಗೆ ಮಾತ್ರ ಕರೆತಾರೋ.

ಕುರುಚಿ, ಕುಮಂತ್ರವ ದೂರ ತಳ್ಳಿ, ನೀ
ಬಾ ನಮ್ಮನು ನೋಡು.
ಜ್ಞಾನ ನಯನವನು ಪಹರೆ ನಿಲಿಸಿ ನೀ
ಒಳಗೆ ಬಂದು ಕೂಡು.

Sri Vidyabharathi Book Centre, Sringeri

CC-O. In Public Domain. Digitized by eGangotri

ಏನು ಅದ್ಭುತಪೂಜೆ ಸಲ್ಲುತಿದೆ ನಿತ್ಯವೂ !

ಬಾನ ತಳಿಗೆಯೊಳಿಟ್ಟ ಹಣತೆಗಳ ರೀತಿಯಲಿ
ರವಿ ಶಶಿಗಳಾರತಿಯ ಬೆಳಗುತಿರಲು,
ನಿನ್ನ ರೂಪವ ದಿನವು ಸಿಂಗರಿಪ ತೊಡವಿನೊಲು
ಲಕ್ಷ ನಕ್ಷತ್ರಗಳು ರಾಜಿಸಿರಲು,
ಮಂದ ಮಂದಾನಿಲನು ಧೂಪದೊಲು ತೀಡುತಿರೆ,
ಗಾಳಿ ಚಾಮರಸೇವೆ ಗೈಯುತಿರಲು,
ಸಕಲ ವನರಾಜಿಗಳು ಹೂವಿನಾರತಿ ಎತ್ತಿ
ನಿತ್ಯವೂ ನಿನಗಾಗಿ ಶೋಭಿಸಿರಲು—

ಏನು ಅದ್ಭುತ ಪೂಜೆ ಸಲ್ಲುತಿದೆ ನಿತ್ಯವೂ,
ಭವ ದುಃಖವನು ಕೊಂವ ಗುರುವೆ ನಿನಗೆ !
ಓಂಕಾರ ನಾದವಿದೊ ಗುಡುಗಿನೊಲು ಮೊಳಗುತಿದೆ
ಸಕಲ ಸಚರಾಚರದ ಎದೆಯ ಒಳಗೆ !
ಓ ಅಪೂರ್ವನೆ ನಿನ್ನ ಕರುಣೆಯನು ಕರೆಯಯ್ಯ
ಬೇಡುವೀ ನಾನಕದ ಹೃದಯದೊಳಗೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನಿಚ್ಛೆಯಂತೆ

ಎಲ್ಲವೂ ನಿನ್ನಿಚ್ಛೆಯಂತೆ ನಡೆದಿರಲು
ನೀನೆ ಭವಸಾಗರವ ದಾಟಿಸುವ ಹಡಗು.
ನಿನ್ನ ಇಚ್ಛೆಯ ನೀನು ಪೂರೈಸುತಿರಲು
ತಮ್ಮ ಗೈಮೆಯಿದೆಂದು ತಿಳಿವರೀ ಜನರು !

ಕೆಸರಿನಲಿ ಸಲಗವನು ಹಿಡಿಯುವಳು ನೀನು
ಹೆಳವನನು ಗಿರಿಯ ತುದಿಗೊಯ್ಯುವಳು ನೀನು
ಹಲವರಿಗೆ ಬ್ರಹ್ಮಪದವಿತ್ತು, ಹಲವರನು
ಭವಜಲಧಿ ಸುಳಿಯೊಳಗೆ ಎಸೆಯುವಳು ನೀನು !

ನೀನು ಚಾಲಕ ಶಕ್ತಿ, ನಾನೊಂದು ಯಂತ್ರ !
ನಾನೊಂದು ಬರಿಯ ಮನೆ, ನೀನದರ ಮಂತ್ರ !
ನಾನೊಂದು ರಥವಾಗೆ, ನೀನದರ ರಥಿಕ
ನೀ ನಡಸೆ ನಾ ನಡೆವೆ, ನಿನ್ನದೀ ಲೋಕ !

Sri Vidyabharathi Book Centre, Sringeri

CC-O. In Public Domain. Digitized by eGangotri

ಮಹಾಮಾಯೆ

ಜಗವ ಮರುಳು ಮಾಡಿಹೆ ನೀ
ಪರಶಿವ ಮನ ಮೋಹಿನೀ !
ಮೂಲಾಧಾರ ಕಮಲದಲ್ಲಿ
ವೀಣಾ ರವ ವಿನೋದಿನೀ.

ದೇಹ ದೇಹ ಯಂತ್ರದಲ್ಲಿ
ಸುಷುಮ್ನಾದಿ ತಂತ್ರದಲ್ಲಿ
ಗುಣಭೇದದ ಮಂತ್ರದಲ್ಲಿ
ಗುಣತ್ರಯ ವಿಭಾಗಿನೀ.

ಮಾಹಾಮಾಯೆ ಅನಾಯಾಸ–
ದಿಂದ ಮೋಹ ಪಾಶದಿ
ಜಗವ ಬಿಗಿದು ನೀನು ಮಾತ್ರ
ತತ್ವಾಕಾಶದಲ್ಲಿ ನಿಂತೆ
ಅಚಲ ಮಿಂಚಿನಂದದಿ !

Sri Vidyabharathi Book Centre, Sringeri

CC-O. In Public Domain. Digitized by eGangotri

ಉಭಯ ಸಂಕಟ

ಧರ್ಮ .ಕರ್ಮಗಳೆಲ್ಲ ಕೊನೆಗಂಡಿತೆನ್ನೊಳಗೆ,
ಘನಶ್ಯಾಮೆಯನು ನಾನು ನೆನೆಯಲಾರೆ.
ನನ್ನ ಇರವನು ಕಂಡು ನಾನೆ ನಾಚುತಲಿರುವೆ,
ನನ್ನ ಮನವನು ನಾನೆ ತಡೆಯಲಾರೆ.

ಕರವಾಲವನು ಹಿಡಿದ ರುಂಡಮಾಲಿಯ ಕುರಿತು
ನಾನಿಲ್ಲಿ ಪೂಜೆಯಲಿ ತೊಡಗಿದಾಗ,
ಕೊಳಲನೂದುತಲಿರುವ ವನಮಾಲಿಯಾಕೃತಿಯು
ಬಂದು ನಿಲ್ಲುವುದಲ್ಲ, ಮಾಳ್ಪುದೇನು !

ಶ್ರೀ ತ್ರಿನೇತ್ರೆಯ ಕುರಿತು ನಾನು ಧ್ಯಾನಿಸುತಿರಲು
ಕಮಲನೇತ್ರನು ಬಂದು ನಿಲ್ಲುವನು ಮುಂದೆ !
ತಾಯ ಶ್ರೀ ಪಾದದಲಿ ಹೂವನರ್ಪಿಸುವಾಗ
ಘನಶ್ಯಾಮಸುಂದರಗೆ ಮರುಳುಗೊಂಡೆ !

ಪ್ರತಿಸಲವು ಪೂಜೆಯಲಿ ಘನಶ್ಯಾಮೆಯನು ಕುರಿತು
ನಾನು ಆರಾಧಿಸುವ ಹೊತ್ತಿನಲ್ಲಿ,
ಘನಶ್ಯಾಮ ಸುಂದರನು ಎಲ್ಲ ಪೂಜೆಯ ಮರೆಸಿ
ಬಂದು ನಿಲುವನು ಹೊನ್ನಕಾಂತಿಯಲ್ಲಿ !

Sri Vidyabharathi Book Centre, Sringeri

CC-O. In Public Domain. Digitized by eGangotri

ಕೃಷಿಕನಿಗೆ

ನಿನ್ನ ಬಾಳಿನ ಹೊಲವು ಪಾಳುಬಿದ್ದಿಹುದಲ್ಲೊ,
ಕೃಷಿಗೈಯಲೂ ಕೂಡ ತಿಳಿಯದಿರುವೆ !
ಎಂಥ ಹೊನ್ನನು ಬೆಳೆದು ತೆಗೆಯಬಹುದಾಗಿತ್ತೊ
ಕೆಲವು ದಿನ ಮೈ ಮುರಿದು ದುಡಿದಿದ್ದರೆ !

ಈಗಲಾದರು ತಾಯ ಶ್ರೀನಾಮವೆಂತೆಂಬ
ಬೇಲಿಯನು ಕಟ್ಟು ನೀ ಕಾಯ್ದುಕೊಳ್ಳೋ,
ಅದಕಿಂತ ಬಲವಾದ ಕಾವಲಿನ್ನಾವುದಿದೆ ?
ಮೃತ್ಯುವೂ ನಿನ್ನ ಬಳಿ ಬರಲಾರನೋ.

ಇಂದೊ ನಾಳೆಯೊ ಹೊಲವ ಹೊಲದೊಡೆಯಗೊಪ್ಪಿಸುವ
ಮುನ್ನವೇ ಎಚ್ಚತ್ತು ಬೆಳೆಯ ತೆಗೆಯೋ.
ಗುರುವಿತ್ತ ಮಂತ್ರವನು ಬೀಜವಾಗಿಸಿ ಬಿತ್ತಿ
ಪ್ರೇಮವಾರಿಯ ಹೊಯ್ದು ಹಸನುಗೊಳಿಸೋ.
ನಿನಗೆ ಈ ಕೆಲಸವೂ ಕಷ್ಟವಾದರೆ ಹೇಳು
ರಾಮಪ್ರಸಾದನಿದೊ ನೆರವಿಗಿಹನೋ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನ ಮಹಿಮೆ

ಜಯ ಜಯ ಜಯ ಪರಬ್ರಹ್ಮ
ನೀನಪಾರ ಮೇಣಗಮ್ಯ
ಪರಾತ್ಪರನೆ ಸಾರಭೂತನೇ.
ಸತ್ಯದ ಹೊಂಬೆಳಗು ನೀನು
ಪ್ರೇಮರಸದ ಬುಗ್ಗೆ ನೀನು
ಶುಭಮಂಗಳ ರೂಪನೇ.

ನಾನಾ ರಸ ಗಂಭೀರಭಾವ–
ಪೂರ್ಣವಾದ ವಿಶ್ವಕವನ
ಶೋಭಿಸುತಿದೆ ನಿತ್ಯವೂ !

ಮಹಾಕವಿ ನೀನಾದಿ ಶಕ್ತಿ,
ನಿನ್ನ ಬಗೆಯ ಛಂದದಲ್ಲಿ
ರವಿ ಶಶಿಗಳು ಮೂಡಿ ಚಲಿಸಿ
ಮುಳುಗುತಿಹವು ನಿನ್ನಲಿ !
ಕನಕ ರುಚಿಯ ತಾರೆಗಳಲಿ
ನಿನ್ನ ಮಹಿಮೆಯನ್ನು ಬರೆವೆ
ನೀಲಾಂಬರ ಪಟದಲಿ !

ಷಡ್ಋತುಗಳ ಸಂವತ್ಸರ
ಜಯಗಾಥೆಯ ಮೊಳಗಿಸುತ್ತ
ನಿನ್ನ ಸುತ್ತ ನಲಿದಿವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹೂವುಗಳಲಿ ನಿನ್ನ ಕಾಂತಿ
ಸಲಿಲಗಳಲಿ ನಿನ್ನ ಶಾಂತಿ
ಘನರವದಲಿ ನಿನ್ನ ನಿಯತಿ
ಜಗಕೆಲ್ಲವು ಮೊಳಗಿದೆ !

ನಿನ್ನ ಸತ್ವ ಅತಿ ಆಗಾಧ
ಅದನು ತಿಳಿವನೆಂತು ಮೂಢ.
ಕೋಟಿ ಸೂರ್ಯ ಕೋಟಿ ಚಂದ್ರ
ಯುಗ ಯುಗಗಳ ಮೊದಲಿನಿಂದ
ನಿನ್ನ ಸೀಮ ಪದ ತಲದಲಿ
ಬೆರಗಾಗುತ ಬಾಗಿನೆ.
ಈ ಮಹಿಮೆಯ ಕಂಡ ಜನದ
ಕಂಗಳೆಲ್ಲ ಆನಂದದ
ಕಂಬನಿಯನು ಕರೆದಿವೆ !

ದೇವ ದೇವ ನಮಿತ ಪ್ರಭೂ,
ಭಕ್ತಿಯ ಕೊಡು ; ಪ್ರೇಮವ ಕೊಡು ;
ಅರಿವನು ಕೊಡು ; ಶಾಂತಿಯ ಕೊಡು,
ಇದೊ ಪ್ರಣಾಮ ಓ ವಿಭೂ !

Sri Vidyabharathi Book Centre, Sringeri

CC-O. In Public Domain. Digitized by eGangotri

ಶಶಿಕಳೆಯೂ ಜ್ವಲಿಸಿದೆ!

ಅದೋ ಅಲ್ಲಿ ಪರಮ ಶಿವನು
ನರ್ತಿಸುವನು ಮೋದದಿ !
ಡಿಮಿ ಡಿಮಿ ಡಿಮಿ ಡಮರುನಾದ
ಮೊಳಗಿದೆ ಬ್ರಹ್ಮಾಂಡದಿ !

ಕೊರಳ ಸುತ್ತ ರುಂಡಮಾಲೆ
ದಿಕ್ಕು ದೆಸೆಗೆ ತೂಗಿದೆ.
ಜಡೆಯ ಗಂಗೆ ಬುಸುಗುಟ್ಟಿದೆ,
ಉಗ್ರ ಅನಲ ಶೂಲ ದೀಪ್ತಿ
ಕಣ್ಣುಗಳನೆ ಕುಕ್ಕಿದೆ !

ಕಟಿಯ ಸುತ್ತ ಸರ್ಪರಾಜಿ
ಹೆಡೆಯಾಡಿಸಿ ಮಿರುಗಿದೆ.
ಅದೊ, ಲಲಾಟದಲ್ಲಿ ನೋಡು
ಶಶಿ ಕಳೆಯೂ ಜ್ವಲಿಸಿದೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ನೀನೆ ದಯಾಮಯ

ನೀನೆ ದಯಾಮಯ, ಇನ್ನಾರಿರುವರು ನಿನ್ನಂದದ ಹಿತಕಾರಿ ?
ನೋವು ನಲಿವಿನಲಿ ಸಮೀಪಬಂಧುವು, ಶೋಕತಾಪ ಭಯಹಾರಿ.

ಸಂಕಟಪೂರಿತ ಮೋಹ ಭವಾರ್ಣವದುತ್ತರಣಕೆ ನೀ ಸಹಕಾರಿ
ಪ್ರಸನ್ನವಾಗಿಸು ಈ ಬಿರುಗಾಳಿಯ, ರಿಪುದಲ ನಿಷ್ಫಲಕಾರೀ !

ಪಾಪದಹನ ಪರಿತಾಪವನಾರಿಸು, ವರ್ಷಿಸು ಶೀತಲವಾರಿ
ಎಲ್ಲರು ತ್ಯಜಿಸುವ ಅಂತಿಮಕಾಲದಿ ನೀನೇ ಆಶ್ರಯಕಾರೀ !

CC-O. In Public Domain. Digitized by eGangotri

ಸಮರ ಕರೆಯುತ್ತಿದೆ

ತುಡುಕು, ತುಡುಕಾಯುಧವ ; ಮನೆಯ ಸುತ್ತಲು ಮೃತ್ಯು
ನಿಂತು ರಣಭೇರಿಯನು ಹೊಡೆಯುತ್ತಿದೆ.
ಜ್ಞಾನತೂಣೀರವನು ಹೆಗಲಿಗೇರಿಸು ; ಹತ್ತು
ಭಕ್ತಿಯ ರಥವ ; ಸಮರ ಕರೆಯುತ್ತಿದೆ !

ಪ್ರೇಮಗುಣವನು ಬಿಗಿದು ನಿನ್ನ ರಸನೆಯ ಧನುವಿ-
ನಿಂದ ಬಿಡು ಶ್ರೀಕಾಳಿನಾಮಾಸ್ತ್ರವ !
ರಥ ರಥಿಕರಲ್ಲಿರಲಿ ; ಭಾಗೀರಥೀ ತೀರ-
ದಲಿ ನಿಂತು ಗೆದ್ದು ಬಾ ಈ ಸಮರವ !

Sri Vidyabharathi Book Centre, Sringeri

CC-O. In Public Domain. Digitized by eGangotri

ತಪಸ್ಸು

ಪ್ರೇಮಗಿರಿ ಕಂದರದ ಗುಹೆಯಲಿ ಯೋಗಿಯಾಗುತ ನಿಲ್ಲುವೆ
ದಿವ್ಯ ನಿತ್ಯಾನಂದ ನಿರ್ಝರದ ಲ್ಲಿ ಧ್ಯಾನದಿ ಮಿಂಯುವೆ.
ತತ್ಪಫಲರಸ ಪಾನಗೈಯುತ ಜ್ಞಾನಸುಧೆಯನು ತಣಿಸುವೆ,
ಪರಮಪುರುಷನ ಪಾದವನು ವೈರಾಗ್ಯ ಕುಸುಮದಿ ಪೂಜಿಪೆ.

ಎದೆಯ ದಾಹಕೆ ನೀರನೆರೆಯಲು ಕೂಪಜಲವನ್ನರಸದೆ
ಶಾಂತಿವಾರಿಯನೆತ್ತಿ ಹೃದಯದ ಹೊನ್ನ ಗಿಂಡಿಯ ತುಂಬುವೆ
ನಿನ್ನ ಪದಪದ್ಮಗಳ ಸುಧೆಯನು ದಿನವು ದಿನವೂ ಕುಡಿಯುತ,
ನಗುವೆ, ಕುಣಿಯುವೆ, ಅಳುವೆ, ಹಾಡುವೆ, ಪರಮತೋಷದಿ ಮುಳುಗುತ.

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲಿ ಅರಸುವೆ ನನ್ನ ?

ಎಲ್ಲಿ ಅರಸುವೆ ನನ್ನ , ಓ ನನ್ನ ಕಿಂಕರನೆ
ನಿನ್ನ ಬಳಿಯೇ ನಾನು ಇರುತಲಿರುವೆ.
ನಾನು ನಿನ್ನೊಂದಿಗೇ ಇದ್ದರೂ ನನಗಾಗಿ
ಎಲ್ಲೊ ದೂರದಿ ಹುಡುಕಿ ಬಳಲುತಿರುವೆ !

ನಾನು ಚರ್ಮದೊಳಿಲ್ಲ, ರೋಮದೊಳಗೂ ಇಲ್ಲ,
ಅಸ್ಥಿಯಲೊ, ಮಾಂಸದಲೊ ಹುದುಗಿಕೊಂಡಿಲ್ಲ ;
ಗುಡಿ ಮಸೀದಿಯೊಳಿಲ್ಲ, ಕಾಶಿ ಕೈಲಾಸದಲೊ,
ದ್ವಾರಕೆ ಅಯೋಧ್ಯೆಯೊಳೊ, ದೊರೆವನಲ್ಲ.

ಸನ್ಯಾಸದೊಳಗಿಲ್ಲ, ವೈರಾಗ್ಯದೊಳಗಿಲ್ಲ,
ಯೋಗಾದಿಸಿದ್ಧಿಗೂ ದೂರ ನಾನು.
ಶ್ರದ್ಧೆ ಎಲ್ಲಿರುವುದೋ ಅಲ್ಲಿ ದೊರೆಯುವೆ ನಾನು
ನನಗಾಗಿ ಹುಡುಕಿದರೆ ಸಿಗುವೆ ನಾನು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನ್ನೊಳಗೆ ನೀನುರು

ನಿನ್ನೊಳಗೇ ನೀನಿರು ಮನವೇ
ಅನ್ಯಾಶ್ರಯದೊಳಗರಸದಿರು,
ನೀನಾವುದನೀತೆರ ಹುಡುಕುತಲಿಹೆಯೋ
ಅದೆ ನಿನ್ನೆದೆಯೊಳಗಡಗಿರಲು !

ಹೃದಯದ ಕರೆಗೋಗೊಡುವನು ಅವನು,
ಸರ್ವಸಿದ್ಧಿಗಳ ಸ್ಪರುಶ ಮಣಿ !
ನಿನ್ನ ಎದೆಯೊಳೇ ಹುಮಗಿದೆ ಕಾಣೋ
ಸಕಲೈಶ್ವರ್ಯದ ರನ್ನಗಣಿ !

ಮುತ್ತು ರತುನಗಳೊ ಪಚ್ಚೆ ಹರಳುಗಳೊ
ಹೃದಯ ಮಂದಿರದ ಅಂಗಳದಿ,
ಚಮುರಿ ಬಿದ್ದಿರಲು, ಎಲ್ಲಿ ಹುಡುಕುತಿಹೆ
ಮರುಳನಂತೆ ಅನ್ಯಾಶ್ರಯದಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ತಿರುಕನಂತೆ ಇರು ಬಾಗಿಲಲಿ

ಏಕ ಪುರಾತನ ಪುರುಷ ನಿರಂಜನ
ಪಾದದಿ ಚಿತ್ತವ ನಿಲಿಸೋ.
ಆದಿಸತ್ಯನವ, ಕಾರಣ ಕಾರಣ
ಚರಾಚರದೊಳಗು ಪ್ರಾಣಮಯ.

ನಿತ್ಯ ಅತೀಂದ್ರಿಯ ಚೈತನ್ಯ ಸ್ವರೂಪ
ಹೃದಿ ಕಂದರದೊಳು ವಿರಾಜಿತ.
ಜ್ಞಾನ ಪ್ರೇಮ ಪುಣ್ಯಾದಿ ಭೂಷಿತ
ಪ್ರಶಾಂತ ಮೂರುತಿ, ಅನಂತಗುಣಭೂತ.

ಚಿರಕ್ಷಮಶೀಲ, ಮಂಗಳದಾತ,
ಭವಸಾಗರದೊಳು ನಿಕಟ ಸಹಾಯ.
ಜೀವರೂಪನವ, ಜ್ಯೋತಿರ್ಮಯನು
ಸರ್ವಾಶ್ರಯ ಸಂತಾಪಹರ.

ಪಾಪಪುಣ್ಯಗಳ ಪರಮ ನ್ಯಾಯವಾನ್,
ದಯಾ ಸಿಂಧು ಮೇಣ್ ಕೃಪಾಮಯ.
ಆತನ ಮಹಿಮೆಯ ನೆನೆವ ತೃಷಿತ ಮನ
ಕರೆಯುವುದೊಲವಿನ ಕಂಬನಿಯ.

ಅಂಥ ಶ್ರೀ ಮುಖವ ನೋಡಿ ನಲಿಯೊ ಮನ,
ನಿರಂತರವು ಎದೆ ಹಸಿದಿರಲಿ.
ಧ್ಯಾನ ಪೂಜೆ ಪ್ರಾರ್ಥನೆಯ ರೂಪದಲಿ
ತಿರುಕನಂತೆ ಇರು ಬಾಗಿಲಲಿ !

Sri Vidyabharathi Book Centre, Sringeri

CC-O. In Public Domain. Digitized by eGangotri

ಅನ್ವೇಷಣೆ

ದೇವ ದೇವನ ನಿಜವನರಿಯಲು
ಮನವು ತೊಳಲುತ ಬಳಲಿದೆ
ಬೀಗ ಮುದ್ರೆಯನಿಟ್ಟ ಕೋಣೆಯೊ-
ಳಲೆವ ಮುರುಳನ ಹೋಲಿದೆ.

ದಿವ್ಯ ಪ್ರೇಮಕೆ ದೊರೆವನಾತನು,
ಶ್ರದ್ಧೆಗಲ್ಲದೆ ಒಲಿಯನು !
ವೇದ ಶಾಸ್ತ್ರ ಪುರಾಣ ದರ್ಶನ-
ದಾಚೆಗೇ ನಿಂತಾತನು !

ಭಕ್ತಿಗೊಲಿಯುವ ಹೃದಯದಮೃತಾ-
ನಂದರೂಪನು ಆತನು ;
ಇದನರಿತ ಆ ಯೋಗಿ ವರ್ಯರು
ಯುಗ ಯುಗವು ತಪಗೈವರು.

ಭಕ್ತಿಯೆಚ್ಚರಗೊಳಲು ಎದೆಯಲಿ
ಅವನೆ ನಿನ್ನನು ಸೆಳೆವನು.
ಈ ರಹಸ್ಯವ ಜಗದ ಸಂತೆಯ
ಜನದ ಜಂಗುಳಿಗೊರೆಯೆನು !

ಶ್ರೀಪ್ರಸಾದನು ನುಡಿವನೀ ತೆರ :
' ಮಾತೃಭಾವದಿ ನೆನೆವೆನು.
ನನ್ನ ಸೂಚನೆಯರಿತು ನೀವೇ
ತಿಳಿಯಿರಾತನ ನಿಜವನು. '

Sri Vidyabharathi Book Centre, Sringeri

CC-O. In Public Domain. Digitized by eGangotri

ಪೂರ್ವಸ್ಮೃತಿ

ಯಾರೊ ನೀ ಗೌರಾಂಗವೇಷಿಯೆ, ತಪ್ತಕಾಂಚನ ಬಂಧುರ
ಎನ್ನ ಎದೆಗೀ ಸುಧೆಯ ಕರೆಯುವ ದಿವ್ಯಮೋಹನ ಸುಂದರ ?

ಪ್ರೇಮಸಿಂಧುವಿನಲ್ಲಿ ನೀನೇ ಚಂಡಮರುತನ ಎಬ್ಬಿಸಿ
ನನ್ನ ದೋಣಿಯನೇತಕೀ ತೆರ ಕಾಡಿಸಿಹೆಯೋ ನೋಯಿಸಿ

ಹಿಂದೆ ಬೃಂದಾವನದಿ ಗೋವನು ಕಾದವನು ನೀನಲ್ಲವೆ ?
ಕೊಳಲನೂದುತ ಗೋಪಿಯರ ನೀ ಮರುಳುಗೊಳಿಸಿದೆಯಲ್ಲವೆ ?

ಅಂದು ಗೋವರ್ಧನವನೆತ್ತುತ ವ್ರಜರ ಕೇಡನು ತವಿಸಿದೆ
ನೊಂದ ಗೋಪೀವೃಂದ ಪದತಲದಲ್ಲಿ ಪ್ರೇಮದಿ ಕರಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಹ್ವಾನ

ಓ ಬನ್ನಿ, ಎಲ್ಲರು ಬನ್ನಿ
ರಾಧಾಪ್ರೇಮದ ಹೊಳೆ ಹರಿಯುತಿದೆ !
ಅತ್ತಲು ಇತ್ತಲು ಸುತ್ತಲು ಮುತ್ತಲು
ಶತಧಾರೆಯೊಳದು ಹರಿಯುತಿದೆ !

ಓ ಬನ್ನಿ, ಎಲ್ಲರು ಬನ್ನಿ,
ತಡಮಾಡಿದರದು ಬತ್ತುವುದು,
ಈಗಲೆ ಬಂದರೆ ಬಿಂದಿಗೆ ತಂದರೆ
ಬಯಸಿದಷ್ಟು ಅದು ದೊರಕುವುದು.

ಓ ಬನ್ನಿ, ಎಲ್ಲರು ಬನ್ನಿ,
ತಡ ಮಾಡದೆ ಬನ್ನಿ,
ಎಲ್ಲರಿಗಾಗಿಯೇ ಹರಿದಿದೆ ಬನ್ನಿ
ಈ ರಾಧೆಯ ಹೃದಯ !
ಬ್ರಹ್ಮಾನಂದದಿ ಮಿಂದಿಯಲು ಬನ್ನಿ,
ಎಲ್ಲಾ ಅವಳ ದಯ.

ಓ ಬನ್ನಿ, ಎಲ್ಲರು ಬನ್ನಿ,
ಹರಿನಾಮವ ನುತಿಸಲು ಬನ್ನಿ,
ರಾಧಾಪ್ರೇಮದ ಹೊಳೆ ಹರಿಯುತಿದೆ
ಶತ ಧಾರೆಯೊಳದು ಹರಿಯುತಿದೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಹೃದಯಬೃಂದಾವನದಿ

ಹೃದಯಬೃಂದಾವನದಿ ಬಂದು ಮನೆಮಾಡಯ್ಯ ಕಮಲಾಪತೀ,
ಓಹೋ ಭಕ್ತಿಪ್ರಿಯನೆ ನನ್ನ ಭಕ್ತಿಯೆ ನಿನಗೆ ರಾಧಾಸತೀ.

ನನ್ನ ದೇಹವೆ ನಿನ್ನ ನಂದಗೋಕುಲವಯ್ಯ,
ನನ್ನ ದೇಹವೆ ನಿನಗೆ ಶ್ರೀಯಶೋದೆ ;
ನನ್ನ ಮುಕ್ತಿಯ ಬಯಕೆ ಗೋಪನಾರಿಯರಯ್ಯ,
ಬಾ ಇಲ್ಲಿ ನೆಲಸಯ್ಯ, ಇದು ನಿನ್ನದೇ.

ಇದನೆತ್ತಿ ಬಿಸುಡಯ್ಯ, ನೋಡು ಬಿದ್ದಿದೆ ಇಲ್ಲಿ
ನನ್ನ ಪಾಪದ ಭಾರ ಗೋವರ್ಧನ ;
ಕಂಸಚರರಾಗಿರುವ ಅರಿ ವರ್ಗಗಳ ಕೊಂದು
ನನ್ನೊಳಗೆ ನೆಲಸಯ್ಯ ಜನಾರ್ಧನ !

ನನ್ನ ಮನಸಿನ ಬಯಲ ಹುಲ್ಲುಗಾವಲ ಚರಿಸು,
ನಿನ್ನ ಕರುಣೆಯ ಕೊಳಲ ಸವಿರಾಗದೊಳಗೆನ್ನ
ಮನದ ಧೇನುವ ನಿನ್ನ ವಶದೊಳಿರಿಸು.
ನನ್ನ ಹೃದಯದ ಕರೆಯ ಯೆಮುನಾ ನದೀ ತಟದಿ
ನನ್ನ ಬಯಕೆಯ ವೃಕ್ಷದಡಿಗೆ ನೆಲಸು.

ಆಲ್ಲಿ ಬೃಂದಾವನದಿ ರಾಖಲನ ಪ್ರೇಮುವೇ
ನಿನ್ನನೀತೆರದಲ್ಲಿ ಬಂಧಿಸಿರಲು,
ಆ ಅಲ್ಲಿ ನನ್ನನೂ ಗೊಲ್ಲನಾಗಿಸು ದೇವ
ಎಂದು ಈ ದಾಶರಥಿ ಬೇಡುತಿಹನು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಡೆಯಲಾರೆನು ಮುಂದೆ

ಹೃದಯವಲ್ಲಭನಿರುವ ಕದಂಬವನವೆನ್ನುವುದು
ಇನ್ನೆಷ್ಟು ದೂರವಿದೆ ಹೇಳು ಕೆಳದೀ ?
ಕೃಷ್ಣ ಗಂಧವು ಇದೆಕೊ ಇಲ್ಲಿಗೂ ಬೀಸುತಿದೆ !
ನಡೆಯಲಾರೆನು ಮುಂದೆ, ಸೋತಿರುವೆನು.

Sri Vidyabharati Book Centre, Sringeri

CC-O. In Public Domain. Digitized by eGangotri

ಯಾರು ಈ ಗಾರುಡಿಗ ?

" ಯಾರು ಈ ಗಾರುಡಿಗ, ಕದಂಬ ವನದಲಿ ಕುಳಿತು
ಕೊಳಲನೂದುತ ಮನವ ಮರುಳುಮಾಡಿ.
ಎದೆಯೊಳಗನೇ ಕಡೆದು, ಅತ್ಮವನೆ ಕೊರೆಕೊರೆದು
ಕೊಳಲಿನುಲಿಯೊಳೆ ಗೈವನೆಂಥ ಮೋಡಿ !

ತುಡಿ ತುಡಿವ ಎದೆಯಲ್ಲಿ, ಸುರಿವ ಕಂಬನಿಯಲ್ಲಿ
ಉಸಿರಿಡದ ಮೌನದಲಿ ಆಲಿಸಿಹೆನು !
ಆಃ, ಅದೋ ಕೊಳಲದನಿ ! ಮಿಂಚುವೊಳೆ ಎದೆಯೊಳಗೆ !
ಮನೆಯೊಳಿರಲಾರೆ ನಾ, ಎಲ್ಲಿ ಅವನು ?

ಎದೆಯು ಹಂಬಲಿಸಿಹುದು, ನನ್ನ ಆ ಪ್ರಿಯತಮನ
ಮತ್ತೊಮ್ಮೆ ಕಾಣದಿರೆ ಬದುಕಲಾರೆ.
ನುಡಿವನುದ್ಧವ ದಾಸ : " ಓ ರಾಧೆ ನೀನವನ
ಕಂಡ ಮರುಚಣದಲ್ಲೆ ಬದುಕಲಾರೆ ! "

CC-O. In Public Domain. Digitized by eGangotri

ಬೇಡಿಕೆ

ನನ್ನಾ ಮಾಧವನನು ಕೊಡು ಮಾಧವಿ ನನಗೆ,
ನನ್ನೊಲವನು, ನನ್ನಿನಿಯನ ಕೊಡು ನನಗೆ.
ನೀನವನನು ಕೊಟ್ಟರೆ, ದಾಸಿಯವ್ಹೋಲಿರುವೆನು ನಾ
ನಿನ್ನಯ ಮನೆಯೊಳಗೆ !

ನಿನ್ನೆದೆಯೊಳಗವನನ್ನೇತಕೆ ಬಚ್ಚಿಟ್ಟಿಹೆ ಮಾಧವಿ ?
ಕೊಡು ನನ್ನಿನಿಯನ ನನಗೆ.
ನಾ ಮುಗ್ಧಳು ; ನನ್ನೊಳಗೇತಕೆ
ನಿನಗೀ ತೆರದ ಹಗೆ ?

ಮೀನಿಗೆ ನೀರೆಂತಂತೆಯೆ
ನನಗವನೇ ಆಧಾರ.
ಅವನಿಲ್ಲದೆ ಜೀವಿಸೆ ನಾ
ಜೀವನವೇ ನಿಸ್ಸಾರ !

ಓ, ಕೊಡು, ಮಾಧವಿ, ಬೇಡುವೆ
ನನ್ನಾ ಮಾಧವನನು ನನಗೆ ;
ಕೊಡು ಹಿಂದಕೆ
ನನ್ನಿನಿಯನ ನನಗೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಏಕೀ ವಿಷಾದವು ರಾಧೆ

ಏಕೀ ವಿಷಾದವು ರಾಧೆ, ಓ ಸೌಮ್ಯ ಶಶಿವದನೆ
ಏಕೆ ಮರುಳಿನ ತೆರದಿ ಹೊರಳುತಿರುವೆ ?
ಕನಕ ವರ್ಣದ ಕಾಯ ಬೂದಿಯೊಲು ಮುಂಕಾಯ್ತು,
ಹೊದ್ದ ಸೆರಗೂ ಜಾರಿದರಿವಿಲ್ಲವೆ ?

ಹಗಲು ಇರುಳೂ ಅತ್ತು ಕೆಂಪಗಾಗಿವೆ ಕಣ್ಣು,
ಬಾಡಿಹುದು ಸುಕುಮಾರ ಕಮಲ ವದನ.
ನಮ್ಮ ಎದೆಯೂ ಕೂಡ ಒಡೆಯಬಹುದೋ ಏನೊ
ನೀನು ಹೇಳದೆ ಇರಲು ನಿನ್ನ ವ್ಯಸನ !

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇರೆ ಹಾದಿಯು ಏನಿದೆ?

ಮೊದಲು ಕೇಳಿದೆನವನ ಮಾಟದ
ಕೊಳಲಿನುಲಿಯನು ದೂರದಿ,
ಬಳಿಕ ಆತನ ಹಾಡು ಮನವನು
ತಟ್ಟಿ ಆತನ ವಿಷಯವೆಲ್ಲವ-
ನೊರೆದುದೆನ್ನೀ ಕಿವಿಯಲಿ.

ಮತ್ತೆ ನೀನೇ ಬಂದು ಓ ಸಖಿ
ಹೆಸರನುಸುರಿದೆ ಕಿವಿಯಲಿ
'ಕೃಷ್ಣ'—ಎನ್ನುವ ಹೆಸರು ಜೇನನು
ಕರೆವುದೆನ್ನೀ ಎದೆಯಲಿ!

ಅವನ ಅಗಣಿತ ಗುಣವನೊರೆದರು
ಅವನನರಿತಿಹ ಹಿರಿಯರು.
ನಾನು ಅಬಲೆಯು ಮತ್ತೆ ಕುಲವಧು,
ಕಠಿಣರೆನ್ನೀ ಹಿರಿಯರು.

ದಿನವೂ ದಿನವೂ ಪ್ರಿಯನ ಒಲವಿಗೆ
ಇಂತು ತುಡಿದಿರೆ ನನ್ನೆದೆ,
ನಾನು ಜೀವವ ಬಿಡುವುದೊಳ್ಳಿತು.
ಬೇರೆ ಹಾದಿಯು ಏನಿದೆ?
ಹೇಳು ಕೆಳದೀ ನನ್ನ ಕೃಷ್ಣನ
ಕಾಣಲಾವುದು ಪಥವಿದೆ?

Sri Vidyabharathi Book Centre, Sringeri

CC-O. In Public Domain. Digitized by eGangotri

ಕಡೆಗೆ ಹರಣವ ನೀಗುವೆ

ಉಳಿವು-ಅಳಿವಿನ ಪರಿ ಆದೆಂತೋ, ಬಲು ವಿಚಿತ್ರವೆ ಪ್ರಿಯಸಖಿ !
ನನ್ನ ಒಲವಿನ ವ್ರಜ ಕಿಶೋರನು
ಹೋದವೇಲಿನ್ನೆಂತು ಜೀವನ
ನಾನು ಧರಿಸಿರಬಲ್ಲೆನು ?
ನನ್ನ ವಿೂರಿದ ಚೆಲುವೆಯರ ಜೊತೆಗೆನ್ನ ಮಾಧವ ಹೋದನು,
ಚೆಲುವೆಯಲ್ಲದ ನನ್ನ ನೀ ತೆರ ಅವನು ಮರೆತೇಬಿಟ್ಟನು !

ಯಾರು ಊಹಿಸಬಲ್ಲರೇ ಸಖಿ—ಯಾರು ಊಹಿಸಬಲ್ಲರು ?
ದಿವ್ಯ ಪ್ರೇಮಿಯು ಕೂಡ ಈ ತೆರ,
ಬಾಹ್ಯರೂಪಕೆ ಮಾರುಹೋಗುತ
ತಿರುಕನಂದದಿ ನಡೆವನೆಂಬುದ ಯಾರು ಊಹಿಸಬಲ್ಲರು ?

ಅವನು ಇಂಥವನೆಂದು ಮೊದಲೇ ನಾನು ಕಾಣದೆ ಹೋದೆನು.
ಅವನ ರೂಪಕೆ ಮರುಳುಗೊಂಡೆನು, ಅವನ ಪಾದವ ನನ್ನ ಎದೆಯಲಿ
ಹಿಡಿವ ಒಂದೇ ಒಂದು ಬಯಕೆಯ
ನಾನು ಪೋಷಿಸಿಕೊಂಡೆನು !

ಕಡೆಗೆ ಉಳಿದಿಹುದೊಂದೆ ದಾರಿಯು : ಯಮುನೆಯಲಿ ನಾ ಮುಳುಗುವೆ ;
ಅಥವ ಗರಳವ ಕುಡಿಯುವೆ,
ಇಲ್ಲದಿರಲೀ ತಮಾಲ ತರುವೊಳು
ಬಳ್ಳಿಯೊಂದನು ಉರುಳುಗೈದೀ
ನನ್ನ ಜೀವವ ತೊರೆಯುವೆ.
ಕಡೆಗೆ, ಓ ಸಖಿ, ಇನಿತು ಯತ್ನಗಳೆಲ್ಲ ನನ್ನನು ಕೊಲದಿರೆ,
ಶ್ಯಾಮ ನಾಮವ ಜಪಿಸಿ ಜಪಿಸೀ ಕಡೆಗೆ ಹರಣವ ನೀಗುವೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಳಲುಲಿ

ಕೇಳಿರೇ ಸಖಿ ಕೇಳಿರೇ ದೂರ ಕೊಳಲಿನ ಕರೆಯನು !
ನಾನು ಹಾರುವೆನಲ್ಲಿಗೀಗಲೆ, ಕಾಯುತಿರುವನು ಕೃಷ್ಣನು
ನೀವು ಬರುವಿರೊ ಇಲ್ಲವೋ, ಸಖಿ ಹೇಳಿರೀಗಲೆ ನಡೆವೆನು.

ನಿಮ್ಮ ಪಾಲಿಗೆ ನನ್ನ ಕೃಷ್ಣನು ಬರಿಯ ಹೆಸರಾಗಿರುವನು,
ನನಗೊ ಆತನು ಹೃದಯದೊಲವಿನ ಉಸಿರಿನುಸುರಾಗಿರುವನು !
ನೀವು ಕಿವಿಯೊಳು ಕೇಳುತಿರುವಿರಿ ಅವನ ಕೊಳಲಿನ ರಾಗವ
ನಾನು ಕೇಳುವೆನಾತ್ಮದಾಳದಿ ಮಧುರ ಮುರಳೀನಾದವ !
" ನಿನ್ನ ಕಾಣದೆ ಕುಂಜಕಾನನ ಬರಿಯ ನೀರಸವಾಗಿದೆ
ಬಾರ ರಾಧೇ, ಬಾರ ಪ್ರಿಯಸಖಿ "–ಎಂದು ಕೊಳಲುಲಿ ಕರೆದಿದೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಡವನು ತುಂಬಲು ನೀನೂ ಬಂದರೆ

ಅಧರದಿ ನಸುನಗೆ, ಕರದಲಿ ಕೊಳಲು,
ತನು ಕಾಂತಿಗೆ ಜಗವಚ್ಚರಿಗೊಳಲು
ಬರುವೀ ಶ್ಯಾಮನ ಬಣ್ಣಕೆ ನಾಚಿ
ನವ ನೀರದವೇ ಕರಗುತಿದೆ !
ಮಯ್ಯ ಮುಚ್ಚಿರುವ ಪೀತಾಂಬರವು
ಮುಗಿಲೊಳು ಮಿರುಗುವ ಮಿಂಚಿಗು ಮಿಗಿಲು,
ಹೃದಯ ಸರೋಜದ ಶ್ರೀವನಮಾಲೆ
ಚರಣವ ಚುಂಬಿಸಿ ತೂಗುತಿದೆ !

ಅದೋ ನೋಡಾ ಪ್ರಭು ನಿಂತಿಹನಲ್ಲಿ
ಯಮುನಾ ತೀರದಿ ತಿಂಗಳ ಚಲ್ಲಿ !
ಕೊಳಲನ್ನೂದಲು ನಂದಕುಲೇಂದು
ಜಗಜಗವೇ ಮರುಳಾಗುತಿದೆ !
ಮನೆ ಮನೆಯೊಳಗಿನ ಗೋಪೀ ಜನಮನ
ಮನೆಯ ತೊರೆವವೋಲು ಈ ಶ್ರೀಕೃಷ್ಣನ
ಕೊಳಲಿನ ಇನಿದನಿ ಕರೆಯುತಿದೆ !

ಇದೊ ನನ್ನೆದೆಗುಡಿಯೊಳಗೂ ಬಂದನು,
ಪ್ರಾಣ-ಬುದ್ಧಿ-ಮನವೆಲ್ಲವ ಕದ್ದನು
ಕೊಳಲಿಂಚರವನು ತುಂಬಿದನು !
ನಾನೀ ವ್ಯಥೆಯನು ನಿನಗೆಂತೊರೆಯಲಿ ?
ಓವೋ ಪ್ರಿಯ ಸಖಿ ಯಮುನಾ ತಟದಲಿ
ಕೊಡುವನು ತುಂಬಲು ನೀನೂ ಬಂದರೆ
ನಿನಗೀ ವ್ಯಥೆಯರಿವಾಗುವುದು !

Sri Vidyabharathi Book Centre, Sringeri

CC-O. In Public Domain. Digitized by eGangotri

ಬರಿ ಕನಸಿದು ಸಖಿ

ಇನ್ನೂ ಕಾಣೆನು ಕೃಷ್ಣನ, ನಾ-
ನಿನ್ನೂ ಕಾಣೆನು ಸಖಿಯೇ,
ಅವನಿಲ್ಲದೆ ಬರಿದಾಗಿದೆ ಮನೆಯೇ !

ನನ್ನ ತಲೆನವಿರು ಅವನಾಗಿದ್ದರೆ, ಸಖಿ
ಬಾಚುತಲಿದ್ದೆನು ಮೃದುವಾಗಿ
ಮೆಲ್ಲನೆ ಬಾಚುತ ಬಕುಲದ ಮಾಲೆಯ
ಮುಡಿಸುತಲಿದ್ದೆನು ಚೆಲುವಾಗಿ,
ಆ ಶ್ರೀಕೃಷ್ಣನು ಕೃಷ್ಣಕೇಶದಲಿ
ಬೆರೆಯುತಲಿದ್ದನು ಒಂದಾಗಿ !

ನನ್ನ ಮೂಗಿನಲಿ ನತ್ತಾಗಿವ್ದರೆ, ಸಖಿ
ನನ್ನ ಧರದ ಮಧು ಚುಂಬನಕೆ
ನಲಿಯುತಲಿದ್ದನು...ಬರಿ ಕನಸಿದು ಸಖಿ,
ಆ ಶ್ರೀ ಕೃಷ್ಣನು ಈ ನಿರ್ಭಾಗ್ಯಳ
ನತ್ತಾಗಿರುವನೆ ಮೂಗಿನಲಿ ?

ನನ್ನೀ ತೋಳಿನ ತೊಡವಾಗಿದ್ದರೆ, ಸಖಿ,
ತೋಳನು ತಿರುವುತ ಹೆಮ್ಮೆಯಲಿ,
ರಾಜವೀಥಿಯೊಳು ನಡೆಯುತಲಿದ್ದೆನು
ಝಣಕು ಝಣಕು ಝಣ ನಾದದಲಿ !

CC-O. In Public Domain. Digitized by eGangotri

ಕೃಷ್ಣವರ್ಣದೊಳಿರಲಿ ಈ ತನು

ನಾನು ಬದುಕಿರಲಾರೆ ಸಖಿಯರೇ,
ನಾನು ಸಾಯುವೆ ನಿಶ್ಚಯ
ತಡೆಯಲಾರೆನು, ತಡೆಯಲಾರೆನು
ಕೃಷ್ಣವಿರಹದ ಬೇಗೆಯ.
ಯಾರಿಗೊಪ್ಪಿಸಿ ಹೋಗಲಯ್ಯೋ
ನನ್ನ ಪ್ರೇಮದ ನಿಧಿಯನು ?
ನಾನು ಸತ್ತರೆ ಚಿತೆಯ ಬೆಂಕಿಗೆ
ಒಡ್ಡದಿರಿ ಈ ತನುವನು.
ಬೇಡಿಕೊಳುವೆನು ಸಖಿಯರೇ, ಇದ-
ನೆಸೆಯಬೇಡಿರಿ ಯಮುನೆಗೆ,
ಏಕೆನಲು ಈ ದೇಹದಲಿ ನಾ–
ನೊಲಿದಿರುವೆ ಶ್ರೀಕೃಷ್ಣಗೆ!
ನನ್ನ ದೇಹವ ಬಿಗಿದು ಕಟ್ಟಿರಿ
ತಮಾಲ ವೃಕ್ಷದ ಕೊಂಬೆಗೆ.
ನನ್ನ ತನುವೂ ಹೊಂದಿಕೊಳುವುದು
ಆ ತಮಾಲದ ಬಣ್ಣಕೆ;
ಏಕೆನಲು ಶ್ರೀಕೃಷ್ಣನಂತೆಯೇ
ಈ ತಮಾಲವು ಶ್ಯಾಮಲ,
ನನ್ನ ಕಿರಿತನದಿಂದಲೂ, ಈ
ಶ್ಯಾಮ ವರ್ಣವು ಮೋಹಕ.
ನನ್ನ ಈ ತನು ಶ್ಯಾಮನೊರ್ವನಿ–
ಗಾಗಿಯೇ ಮುಡಿಪಾಗಿದೆ.
ಕೃಷ್ಣ ವರ್ಣದೊಳಿರಲಿ, ಈ ತನು
ಅಗಲುವುದೆ ಬೇಡಾಗಿದೆ!

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೊಂದೆ ಶಂಕೆ ನನಗೆ

ಹಾ! ನೆಲಕೆ ಬಿದ್ದಳಲ್ಲ ಮೂರ್ಛೆಹೋದ ರಾಧೆಯು
'ಕೃಷ್ಣ'—ಎಂಬ ಹೆಸರಿನೊಡನೆ ಮುಗಿದುವವಳ ಕಂಗಳು
ಏನು? ಕತೆಯು ಮುಗಿಯಿತೇನು? ಅಯ್ಯೋ ಕೃಷ್ಣ ಪ್ರಿಯತಮೆ
ಒಂದೇ ಒಂದು ಚಣದ ಹಿಂದೆ ಮಾತಾಡಿದೆಯಲ್ಲವೆ?

ಬಳಿಗೆ ಬಂದರಲ್ಲಿ ನೋಡು ಅವಳ ಪ್ರಾಣ ಸಖಿಯರು
ಶಿಶಿರ ಗಂಧವಾರಿಯಿಂದ ಉಪಚಾರವ ಗೈವರು.
ಹಲವರಳುತ ನಿಂದಿರುವರು ರಾಧೆಗಾದ ಪಾಡಿಗೆ,
ತಣ್ಣೀರನು ಚುಮುಕಿಸುವರು ಕೆಲವರವಳ ವದನಕೆ.

ಸಹಿಸಲಾರರೀ ಸಖಿಯರು ರಾಧೆಗಾದ ಗತಿಯನು
ಬಹುಶಃ ಮೇಲೇಳಬಹುದು ಉಪಚಾರಕೆ ರಾಧೆಯು;
ಆದರೊಂದೆ ಶಂಕೆ ನನಗೆ: ಕೃಷ್ಣ ಪ್ರೇಮ ಮೃತಳಿಗೆ
ಹರಣವ ತಂದೀವ ಶಕ್ತಿ ಇರುವುದೆ ತಣ್ಣೀರಿಗೆ?

CC-O. In Public Domain. Digitized by eGangotri

ಬಯಕೆ

ಓ ನನ್ನ ಪ್ರಿಯತಮನೆ ಘನ ಶ್ಯಾಮ ಸುಂದರನೆ
ಏನು ಹೇಳಲಿ ನಿನಗೆ ಮತ್ತೆ ನಾನು ?
ನಾನೋರ್ವ ನಿರ್ಭಾಗ್ಯ ಅಬಲೆಯಾದುದರಿಂದ
ಏನ ಹೇಳಲು ನನಗೆ ತೋರದಿಹುದು.

ಅಂಗೈಯ ಕನ್ನಡಿಯ ರೀತಿಯಲಿ ನೀನಿರುವೆ,
ನನ್ನ ಮುಡಿಗಿಡುವಂಥ ಹೂವಿನಂತಿರುವೆ,
ಓವೊ ಸಖ ನಾ ನಿನ್ನ ಒಂದು ಹೂವನು ಮಾಡಿ
ಮುಡಿಯೊಳಿಡುವೆ ;
ನಿನ್ನನಾರೂ ಮತ್ತೆ ಕಾಣದಿಹ ರೀತಿಯಲಿ
ನನ್ನ ಜಡೆಯೊಳು ನಿನ್ನ ಅಡಗಿಸಿಡುವೆ !

ತಾಂಬೂಲದಂತಿರುವೆ, ಓ ಇನಿಯ ನೀನೆನಗೆ,
ಕಣ್ಣಿಗಂಜನದಂತೆ ತೋರುತಿರುವೆ.
ಓವೊ ಸಖ ನಾ ನಿನ್ನ ತುಟಿಗೆ ಲೇಪಿಸಿಕೊಳುವೆ !
ನನ್ನ ಕಣ್ಣಿಗೆ ನಿನ್ನ ಬಳಿದುಕೊಳುವೆ !
ಮಗ ಮಗಿಪ ಶ್ರೀಗಂಧದಂತಿರುವೆ ಓ ನಲ್ಲ,
ಕೊರಳ ಕಂಠೀಹಾರದಂತೆ ಇರುವೆ !
ನಿನ್ನ ನಾ ಮೈಗೆಲ್ಲ ಬಳಿದು ದೇಹಾತ್ಮಗಳ
ಸಂತವಿಡುವೆ.
ಕೊರಳ ಹಾರವ ಮಾಡಿ ಹಾಕಿಕೊಳುವೆ,
ತುಡಿ ತುಡಿವ ನನ್ನೆದೆಯ ಮೇಲಿರುತ ನಿತ್ಯವೂ
ಅದರ ತುಡಿತವ ನೀನು ಕೇಳುತಿರುವೆ !

ನನ್ನೆದೆಯ ನಿಧಿ ನೀನು,
ನನ್ನ ಮನದೈವ ನೀ
ರೆಕ್ಕೆ ಎಂತೋ ಹಕ್ಕಿಗಂತೆ ನನಗೆ,
ಮೀನ್ಗೆ ನೀರೆಂತೊ ನೀನಂತೆ ನನಗೆ !

Sri Vidyabharathi Book Centre, Sringeri

CC-O. In Public Domain. Digitized by eGangotri

ಮಧುರ ಮಿಲನ

ರಾಧಾಕೃಷ್ಣರ ಮಧುರ ಮಿಲನವಿದೊ ನಿಧುವನದಿ !
ಅನುಪಮ ರೂಪರು, ಅನಂತ ಪ್ರೇಮದ ಮೂರ್ತಿಗಳು
ಕಟ್ಟ ಕಡೆಯಲಿ ಒಂದಾಗಿರುವರು
ಈ ಅತಿಸುಂದರ ನಿಧುವನದಿ !

ಕನಕವರ್ಣದಲಿ ರಂಜಿಸೆ ರಾಧೆ,
ನೀಲ ಮಣಿಯವೊಲು ಹೊಳೆವನು ಕೃಷ್ಣ !
ಒಂದೆಡೆ ತೂಗುತಲಿದೆ ವನಮಾಲೆ
ಮತ್ತೊಂದೆಡೆ ಕಂಠೀಹಾರ ;
ಒಂದೆಡೆ ಶೋಭಿಸೆ ಕರ್ಣಕುಂಡಲವು,
ಮತ್ತೊಂದೆಡೆ ರನ್ನದ ಬೆಂಡೋಲೆ !

ಒಂದು ಕೆನ್ನೆಯಲಿ ಮೂಡುವ ಸೂರ್ಯ,
ಮತ್ತೊಂದರೊಳೊ, ಮೂಡುವ ಚಂದ್ರ !
ಒಂದೆಡೆ ರಾಜಿಸೆ ಮಯೂರ ಪಿಂಛ,
ಮತ್ತೊಂದೆಡೆಯೊಳು ಫಣಿವೇಣಿ.
ಓಹೋ ನೋಡಿರೆ, ರಾಧಾಕೃಷ್ಣರ
ಮಧುರ ಮಿಲನವಿದೊ ನಿಧುವನದಿ !

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿತವಚನ*

ತಡೆಯದಿರಿ ತಡೆಯದಿರಿ ರಥ ಚಕ್ರಗಳನು,
ಚಕ್ರದಿಂದೀ ರಥವು ಮುನ್ನಡೆವುದೇನು ?
ಯಾವ ಚಕ್ರಿಯ ಇಚ್ಛೆಗೀ ಲೋಕ ಚಕ್ರ
ನಡೆಯುವುದೊ, ಅವನಿಚ್ಛೆ ನಡೆಸುವುದು ಇದನೂ !

---

* ಶ್ರೀಕೃಷ್ಣನು ಬೃಂದಾವನವನ್ನುಳಿದು ಮಥುರೆಗೆ ಹೊರಟು ರಥವೇರಿದಾಗ ರಥಚಕ್ರಗಳನ್ನೆ ಬಿಗಿದಪ್ಪಿದ ಗೋಪಿಯರಿಗೆ ಅಕ್ರೂರನು ಹೇಳಿದ ಮಾತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಶ್ನೆ—ಉತ್ತರ

ಬಿಂಕದಿ ನುಡಿವಳು ಮಥುರಾಪುರನಾರಿ :
" ಓ ನೀನಾರೇ ಗೋಪ ಕುಮಾರೀ,
ಚಕ್ರವರ್ತಿ ಶ್ರೀ ಕೃಷ್ಣನನೀತೆರ
ಹರಕು ಬಟ್ಟೆಯೊಳೆ ನೋಡುವೆನೆನ್ನುವ
ಹಳ್ಳಿ ಗಮಾರಿ ?

ಸಪ್ತ ದ್ವಾರಗಳ ಪಹರೆಯಾಚೆಗಿದೆ
ಕೃಷ್ಣನಿವಾಸ !
ಎಂತು ಬಂದೆ ನೀ, ನಿನಗೆಷ್ಟು ಧೈರ್ಯವೇ,
ಕಾಪಿನರಮನೆಯ ನೀನೆಂತು ನುಗ್ಗುವೆ,
ಓ, ಬಿಡು, ನಿನಗಿಲ್ಲ ಪ್ರವೇಶ "

ಗದ್ಗದದೊಳು ನುಡಿವಳು ಗೋಪಕುಮಾರಿ :
" ಓ ಪ್ರಿಯತಮ ಕೃಷ್ಣಾ
ಗೋಪೀ ಜನಮನ ಹಾರೀ,
ದಯಮಾಡಿಸು ಎಲ್ಲಿಹೆ ನೀ
ಸುಂದರ ಮೊಗದೋರಿ.

ಓ ಗೋಪೀ ಜನ ವಲ್ಲಭ—ಮಥುರಾಪುರವಾಸ.
ಓ ರಾಧಾ ಪ್ರಿಯತಮ ಬಾರಾ—ಹೃದಯ ನಿವಾಸ.
ಓ ಬಾರಾ, ಲಜ್ಜಾ ಭಯ ದೂರ,
ಬಾರಾ, ಗೋಪೀಜನಜೀವನಧನ
ಸಂರಕ್ಷಣ ಚತುರ ! "

Sri Vidyabharathi Book Centre, Sringeri

CC-O. In Public Domain. Digitized by eGangotri

ನೆನಪಿಲ್ಲವೇನೊ !

ನೀ ಮಥುರೆಯೊಳು ರಾಜ್ಯ ವೈಭವದಿ ಮುಳುಗಿರಲು
ನಾವು ನಿನ್ನನು ಈಗ ನೆನೆವುದೆಂತು ?
ಅರಸಿನುಡುಗೆಯನುಟ್ಟು ಆನೆಯಂಬಾರಿಯಲಿ
ನಡೆವ ನಿನಗೆಲ್ಲಿಯದೊ ನಮ್ಮ ನೆನಪು !

ಹಿಂದೆ ಬೃಂದಾವನದಿ ಎಂತು ಗೋವನು ಕಾದು
ನಲಿದೆ ನೀನೆಂಬುದನು ಮರೆತೆಯೇನೊ !
ವ್ರಜಗೋಪಿಯರ ಮನೆಯೊಳಂದು ಹಾಲ್‌ಬೆಣ್ಣೆ ಗಳ
ಕದ್ದು ಮೆದ್ದಾ ಸೊಗವು ನೆನಪಿಲ್ಲವೇನೊ !

Sri Vidyabharathi Book Centre, Sringeri

CC-O. In Public Domain. Digitized by eGangotri

ನೆನಪು

ಓ, ಎಲ್ಲಿದೆ ಬೃಂದಾವನ ತೋರಿರೋ
ಎಲ್ಲಿ ಯಶೋದಾ ತಾಯಿ ?
ಎಲ್ಲೆ ನನ್ನ ಆ ಧವಳ ಶ್ಯಾಮಲಿ
ಎಲ್ಲಿದೆ ಮೋಹನ ಮುರಲಿ ?

ಎಲ್ಲಿ ನನ್ನ ಪಿತ ನಂದಗೋಪ, ಮ–
ತ್ತೆಲ್ಲಿಹನಾ ಬಲರಾಮ ?
ಎಲ್ಲಿ ನನ್ನ ಪ್ರಿಯ ಸ್ನೇಹಿತರಿಬ್ಬರು,
ಆ ಶ್ರೀಧಾಮ ಸುಧಾಮ ?

ಯಮುನಾ ತಟದೆಡೆ ವಂಶೀ ವಟದೆಡೆ
ಪ್ರಿಯ ಗೋಪೀ ಜನವೆಲ್ಲಿ ?
ನನ್ನ ಪ್ರಾಣಸಖಿ ರಾಧಾರಮಣಿಯು
ಹುದುಗಿರುವಳು ಇನ್ನೆಲ್ಲಿ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಏನು ನಿರುಪಮ ಸೊಬಗು

ಏನು ನಿರುಪಮ ಸೊಬಗು ! ಓಹೋ ಎಂಥ ಚೆಲುವಿನ ಮೋಹನ !
ನನ್ನ ಹೃದಯದ ಮೂರ್ತಿ ಬಂದನು ಎದೆಯ ಗುಡಿಸಿಲಿಗೀ ದಿನ.

ಎದೆಯೊಳೊಲವಿನ ಚಿಲುಮೆ ಚಿಮ್ಮಿವೆ ಹತ್ತು ಕಡೆಗೂ ಸುಮ್ಮನೆ !
ಯಾವ ಸಂಪದವನ್ನು ಸುರಿಯಲಿ ಹೇಳು ನಿನ್ನೀ ಪದದೆಡೆ !

ನನ್ನ ಹರಣವೆ ಶರಣು ನಿನಗೆ ; ನನ್ನ ಆತ್ಮವೆ ನಿನ್ನದು.
ಮತ್ತೆ ಏನನು ನೀಡಲಯ್ಯಾ ? ನನ್ನದೆಲ್ಲವು ನಿನ್ನದು.

CC-O. In Public Domain. Digitized by eGangotri

ಮೋಹನ ಮೂರುತಿಯನು ನೆನೆಯೊ

ನಿರಂಜನ ಹರಿಚಿದ್ಘನ ಮೂರುತಿಯನು ನೆನೆಯೊ
ನಿರಂತರ–ಮೋಹನ ಮೂರುತಿಯನು ನೆನೆಯೊ.

ಅನುಪಮ ತೇಜನ, ಸುಂದರ ರೂಪನ
ಭಕ್ತರ ಎದೆಯಲಿ ರಂಜಿಪನ,
ಕೋಟಿ ಚಂದ್ರ ಸಮ ಕಾಂತಿಯ ನಾಚಿಸಿ
ವಿಂಚಿನಂತೆ ನಮ್ಮೆದೆಯೊಳು ರಂಜಿಸಿ
ಮೋಹಿಪನ–
ನಿರಂಜನ ಹರಿಚಿದ್ಘನ ಮೂರುತಿಯನು ನೆನೆಯೋ
ನಿರಂತರ—ಮೋಹನ ಮೂರುತಿಯನು ನೆನೆಯೋ.

ಹೃದಯ ಪದ್ಮದಲಿ ಪೂಜಿಸು ಆತನ,
ಶಾಂತ ಮಾನಸದಿ ಜ್ಞಾನ ನಯನದಲಿ
ಅಪೂರ್ವ ದರ್ಶನ ಮೋಹನನ,
ಭಕ್ತಿ ಯೋಗದಾವೇಶದಿ ಮುಳುಗಿಪ
ಚಿದಾನಂದ ರಸ ಸಾಗರನ–
ನಿರಂತರ ಹರಿಚಿದ್ಘನ ಮೂರುತಿಯನು ನೆನೆಯೋ
ನಿರಂತರ—ಮೋಹನ ಮೂರುತಿಯನು ನೆನೆಯೋ,.